ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 44 ನವಂಬರ್ 2, 1986 ಬೆಲೆ 80 ಪೈಸೆ

ರಾಜ್ಯೋತ್ಸವ ವಿಶೇಷಾಂಕ

ಐಕ್ಯರಂಗದ ರಾಜ್ಯೋತ್ಸವ ವಿಶೇಷಾಂಕವನ್ನು 16-11-86ರಂದು ಪ್ರಕಟಿಸಲಾಗುವುದು. ಕಾರಣಾಂತರದಿಂದ ಸಕಾಲದಲ್ಲಿ ವಿಶೇಷಾಂಕ ತರಲಿಕ್ಕಾಗಲಿಲ್ಲ. ವಿಶೇಷಾಂಕ 48 ಪುಟಗಳಷ್ಟು ಹೊಂದಿದ್ದು ಅದರ ಬೆಲೆ ರೂ. 2-50.

ಹೆಚ್ಚಿನ ಪ್ರತಿಗಳಿಗಾಗಿ ಕೂಡಲೇ ಬರೆಯಿರಿ.

-ವ್ಯವಸ್ಥಾಪಕ ಸಂಪಾದಕ

ನಿಷ್ಠಾವಂತ ಕಮ್ಯುನಿಸ್ಟ್ ಕಾಮ್ರೇಡ್ ಮಹಮದ್ ಹಸನ್‌ಖಾನ್ ನಿಧನ

ಸಮತಾವಾದದ ಸಾಧನೆಯೇ ಜೀವನದ ತನ್ನ ಮುಖ್ಯ ಗುರಿ, ಅದಕ್ಕಾಗಿ ರೈತ-ಕಾರ್ಮಿಕರನ್ನು ಸಂಘಟಿಸಿ, ಕ್ರಾಂತಿಕಾರಿ ಚಳುವಳಿ ನಡೆಸಿ, ಅವರಲ್ಲಿ ರಾಜಕೀಯ ಜಾಗೃತಿ ತುಂಬಿ, ಗುರಿಸಾಧನೆಗೆ ಅವರನ್ನೆಲ್ಲ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರನ್ನಾಗಿ ಸೇರಿಸಿ, ಬಲಿಷ್ಠವಾದ ಪಕ್ಷವನ್ನು ಕಟ್ಟಿ ಚಳುವಳಿಯನ್ನು ಮುಂದಕ್ಕೊಯ್ಯ ಬೇಕೆಂಬಾಶೆಯನ್ನು ಹೊಂದಿರುವ ಪಕ್ಷದ ಮುಖಂಡನಿಗೆ ಕಾರ್ಮಿಕ ಚಳುವಳಿಯ ಮಧ್ಯೆ ಕೊನೆಯುಸಿರೆಳೆಯುವ ಅವಕಾಶ ದೊರೆತರೆ ಅದಕ್ಕಿಂತ ಹೆಚ್ಚಿನ ಆನಂದಮಯ ಕಾಲ ಮತ್ತೊಂದಿಲ್ಲ. ಅಂಥ ಸೌಭಾಗ್ಯ ಪಡೆದವರು ಸಿ. ಪಿ. ಐ. (ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿಯ ಕಾರ್ಯದರ್ಶಿ, ರಾಜ್ಯ ಸಮಿತಿ ಸದಸ್ಯ, ರೈತ-ಕಾರ್ಮಿಕರ ಮುಖಂಡ ಮಹಮ್ಮದ್ ಹಸನ್‌ಖಾನ್. ಶಹಾಬಾದಿನಲ್ಲಿ ಎ.ವಿ.ಬಿ. ಇಂಜಿನಿಯರಿಂಗ್ ಕಾರ್ಖಾನೆಯ ಸಾವಿರಾರು ಕಾರ್ಮಿಕರು ತಮ್ಮ ಒಂದೂವರೆ ತಿಂಗಳ ಐಕ್ಯ ಮುಷ್ಕರ ನಡೆಸುತ್ತಿದ್ದಾಗ, ರಾತ್ರಿ ಹಗಲು ಅವರ ಜೊತೆಗಿದ್ದು, ಮಾರ್ಗದರ್ಶ ನೀಡುತ್ತಿದ್ದಂತೆಯೇ ಅಕ್ಟೋಬರ್ 25ರಂದು ರಾತ್ರಿ 8.30ಕ್ಕೆ ಹೃದಯಾಘಾತದಿಂದ ಮರಣವನ್ನಪ್ಪಿದರು ಮಹಮ್ಮದ್ ಹಸನ್‌ಖಾನ್.

ತಾ. 25ರಂದು ರಾತ್ರಿ 8-30ಕ್ಕೆ ಸಿ.ಐ.ಟಿ.ಯು. ಅಧ್ಯಕ್ಷ ಸೂರ್ಯನಾರಾಯಣರಾವ್ ಅವರ ಜೊತೆಯಲ್ಲಿ ಊಟಕ್ಕೆ ಹೊರಟಿದ್ದ ಖಾನ್‌ಸಾಹೇಬರು, ಮೂತ್ರ ವಿಸರ್ಜನೆಗೆ ಬಾತ್‌ರೂಮಿಗೆ ಹೋದಾಗ ಅಲ್ಲೇ ಹೃದಯಾಘಾತಕ್ಕೊಳಗಾಗಿ ಕುಸಿದುಬಿದ್ದರು. ತತ್‌ಕ್ಷಣ ವೈದ್ಯರನ್ನು ಕರೆಸಲಾಯಿತು. ಉಪಶಮನ ಮಾಡಲಾಯಿತು. ಆಕ್ಸಿಜನ್ ಕೊಡಲಾಯಿತು. ಕೆಲವೇ ನಿಮಿಷದಲ್ಲಿ ಎರಡನೇ ಹೃದಯಾಘಾತಕ್ಕೆ ತುತ್ತಾದ ಖಾನ್ ಸಾಹೇಬರು ಮತ್ತೇಳದೆ ಕೊನೆಯುಸಿರೆಳೆದರು. ಅಂದೇ ರಾತ್ರಿ ಅವರ ಮೃತ ದೇಹವನ್ನು ಗುಲ್ಬರ್ಗದಲ್ಲಿಯ ಅವರ ಮನೆಗೆ ಕೊಂಡೊಯ್ಯಲಾಯಿತು. ರವಿವಾರ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೂ, ಊರ ಪ್ರಮುಖರೂ ರೈತ-ಕಾರ್ಮಿಕರೂ ಅವರಿಗೆ ಕೊನೆಯ ವಂದನೆಗಳನ್ನು ಅರ್ಪಿಸಿದರು. ಅವರ ಮನೆಮುಂದೆ ಹಾಗೆಯೇ ಶವಾಗಾರದಲ್ಲಿ ಸಿ.ಪಿ.ಐ. (ಎಂ) ಮುಖಂಡರಾದ ಎಸ್. ಸೂರ್ಯನಾರಾಯಣರಾವ್ ಅವರು ಪಕ್ಷದ ಸಂಘಟನೆಗೆ, ರೈತ ಕಾರ್ಮಿಕ ಚಳುವಳಿಗೆ ಮಹಮ್ಮದ್ ಹಸನ್‌ಖಾನ್ ಅವರು ಸಲ್ಲಿಸಿದ ಅಪಾರ ಸೇವೆಯನ್ನು ವಿವರಿಸಿ, ರಾಜ್ಯ ಸಮಿತಿ ಪರವಾಗಿ ಅಪಾರ ಸಂತಾಪ ವ್ಯಕ್ತ ಮಾಡಿದರು. ಎಲ್ಲ ಗೌರವಗಳೊಂದಿಗೆ ಅವರ ಸ್ಮಶಾನಯಾತ್ರೆ ಮುಗಿಸಲಾಯಿತು.

ಜೀವನ ಚರಿತ್ರೆ

ಹೈದರಾಬಾದ್ ನಿಜಾಮನ ಸರಕಾರದಲ್ಲಿ ಹಸನಖಾನ್ ಆಡಿಟ್ ಖಾತೆಯಲ್ಲಿ ಕೆಲಸ ಮಾಡುತ್ತಿದ್ದರು. ಆಗಲೇ ಅವರು ಕಮ್ಯುನಿಸ್ಟ್ ಪಕ್ಷದೆಡೆ ಆಕರ್ಷಿತರಾಗಿದ್ದರು. 1945 ರಲ್ಲಿ ಹೈದರಾಬಾದಿನಲ್ಲಿ ರಜಾಕಾರ ದಬ್ಬಾಳಿಕೆಯ ವಿರುದ್ಧ ಕಮ್ಯುನಿಸ್ಟ್ ಪಕ್ಷ ಚಳುವಳಿ ಪ್ರಾರಂಭಿಸಿದಾಗ, ಆವಾಗಲೇ ನಿಜಾಮಶಾಹಿ ವಿರುದ್ಧ ಪ್ರಜಾಪ್ರಭುತ್ವ ಚಳುವಳಿ ನಡೆಯುತ್ತಿದ್ದಾಗ' ರಜಾಕರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಹಸನ್‌ಖಾನ್ ಅವರು ತನ್ನ ನೌಕರಿಗೆ ರಾಜೀನಾಮೆ ನೀಡಿ ಗುಲ್ಬರ್ಗಾದಲ್ಲಿ ನೆಲಸಿದರು. ಉಪಜೀವನಕ್ಕಾಗಿ ಅರ್ಜಿ ಟೈಪ್ ಮಾಡುವ ಕೆಲಸ ಪ್ರಾರಂಭಿಸಿದರು. ಗುಲ್ಬರ್ಗಾದಲ್ಲಿ ಗಂಗಾಧರ ನೋಶಿ, ಶ್ರೀನಿವಾಸ ಗುಡಿ, ಅಬ್ದುಲ್ ಕರೀಂ ಹಾಗೆಯೇ ಹೈದರಾಬಾದಿನ ಮುಕ್ತುಂ ಮೊಹಿಯುದ್ದೀನ್, ರಾಜಬಹದೂರ ಗೌಡ್ ಮೊದಲಾದವರ ಸಂಪರ್ಕ ಬೆಳೆಸಿ, ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ಸ್ವೀಕರಿಸಿ, ಅಂದಿನಿಂದ ಕೊನೆಯುಸಿರೆಳೆಯುವವರೆಗೂ ಮಾರ್ಕ್ಸ್‌ವಾದ-ಲೆನಿನವಾದದ, ಕಮ್ಯುನಿಸ್ಟ್

(8ನೇ ಪುಟ ನೋಡಿ)

ನಮ್ಮನ್ನಗಲಿದ ಸಂಗಾತಿಗೆ ರಾಜ್ಯ ಸಮಿತಿಯ ಶ್ರದ್ಧಾಂಜಲಿ

ಕರ್ನಾಟಕ ರಾಜ್ಯ ಸಮಿತಿ ಸದಸ್ಯರೂ, ಗುಲ್ಬರ್ಗಾ ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರೂ, ಎಂ.ಎಸ್.ಕೆ. ಮಿಲ್ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿಯವರೂ, ರೈತ ಮುಖಂಡರೂ ಆದ ಮಹಮ್ಮದ್ ಹಸನ್‌ಖಾನ್ ಅವರು ಅ. 25 ರಂದು ರಾತ್ರಿ ಶಹಬಾದಿನಲ್ಲಿ ಎ. ವಿ. ಬಿ. ಕಾರ್ಖಾನೆಯ ಕಾರ್ಮಿಕರ ಮುಷ್ಕರಕ್ಕೆ ಮುಂದಾಳತ್ವ ನೀಡುತ್ತಿದ್ದಾಗ ಆಕಸ್ಮಾತ್ತಾಗಿ ಹೃದಯಾಘಾತದಿಂದ ಮರಣವನ್ನಪ್ಪಿದ್ದಾರೆ. ಅವರು ಪರಿಷ್ಕರಣ ವಾದಿಗಳ ವಿರುದ್ಧ ಹೋರಾಡಿ ಸಿ.ಪಿ.ಐ. (ಎಂ) ಪಕ್ಷವನ್ನು ಉಳಿಸಿ ಬೆಳೆಸಿದ್ದಾರೆ. ನಾಲ್ಕೂವರೆ ದಶಕಗಳಿಂದಲೂ ಅವರು ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ, ಮುಖಂಡನಾಗಿ, ಶಿಕ್ಷಕನಾಗಿ ಕೆಲಸ ಮಾಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಅವರು ಗುಲ್ಬರ್ಗಾ ಜಿಲ್ಲೆಯಲ್ಲಿ ಕಾರ್ಮಿಕರ ಮತ್ತು ರೈತರ ಸಂಘಟನೆ ವಿಸ್ತಾರಗೊಳಿಸಿ ಹಲವಾರು ಹೋರಾಟಗಳನ್ನು ನಡೆಸಿದ್ದಾರೆ. ಉತ್ತಮ ಕಾರ್ಯಕರ್ತರನ್ನು ಪಕ್ಷಕ್ಕೆ ತಂದಿದ್ದಾರೆ.

ತಾ. 27-28 ರಂದು ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಮಹಮ್ಮದ್ ಹಸನ್‌ಖಾನ್ ಅವರ ಆಕಸ್ಮಿಕ ನಿಧನಕ್ಕೆ ತನ್ನ ಅಪಾರ ಸಂತಾಪ ವ್ಯಕ್ತಮಾಡಿ, ಅವರ ಗೌರವಾರ್ಥ ಮೂರು ನಿಮಿಷ ಮೌನ ಆಚರಿಸಿತು. ಅವರ ಕುಟುಂಬದವರ ದುಃಖದಲ್ಲಿ ಸಹಭಾಗಿಗಳಾಗುವ ನಿರ್ಣಯವನ್ನು ಕೈಗೊಂಡಿತು.

ಕರ್ನಾಟಕ ಪ್ರಾಂತ ರೈತ ಸಂಘದಿಂದ ಮುಖ್ಯ ಮಂತ್ರಿಗಳೊಂದಿಗೆ ಮಾತುಕತೆ

ಕರ್ನಾಟಕ ರಾಜ್ಯ ಮುಖ್ಯ ಮಂತ್ರಿಗಳ ಆಹ್ವಾನದ ಮೇರೆಗೆ, ಪ್ರಾಂತ ರೈತ ಸಂಘದ ಪದಾಧಿಕಾರಿಗಳು 27.11.86 ರಂದು ಅವರನ್ನು ಭೇಟಿ ಮಾಡಿ ಮಾತು ಕತೆ ನಡೆಸಿದರು.

ದಿನಾಂಕ 29. 9. 86 ರಂದು ಮುಖ್ಯ ಮಂತ್ರಿಗಳಿಗೆ "ವಿಧಾನ ಸೌಧ ಚಲೋ" ಕಾರ್ಯಕ್ರಮದ ಮೂಲಕ ಅರ್ಪಿಸಿದ್ದ ಮನವಿಯ ಬಗ್ಗೆ ಚರ್ಚೆಯಲ್ಲಿ ಮುಖ್ಯಮಂತ್ರಿಯವರಿಂದ ಬಂದ ಉತ್ತರಗಳು ಸ್ಪಷ್ಟವಾಗಿಲ್ಲ ಮತ್ತು ನಿರ್ದಿಷ್ಟವಾಗಿರಲಿಲ್ಲ. ವಿವಿಧ ಅಂಶಗಳ ಬಗ್ಗೆ ನೀಡಿದ ಸಮಜಾಯಿಷಿಗಳು ಯಾವಾಗ ಯಾರಿಗಾಗಿ ಜಾರಿಯಾಗುತ್ತವೆ ಎಂಬ ಬಗ್ಗೆಯೂ ಸ್ಪಷ್ಟವಾಗಿರಲಿಲ್ಲ ಎಂದು ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದಲ್ಲಿ ಪಿ. ರಾಮಚಂದ್ರ ರಾವ್ ಹಾಗೂ ಅಧ್ಯಕ್ಷ ಎಂ. ಎನ್. ಉಗ್ರಪ್ಪನವರು ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಆದುದರಿಂದ ಕರ್ನಾಟಕ ಪ್ರಾಂತ ರೈತ ಸಂಘದ ಘಟಕಗಳು ತಮ್ಮ ಹತ್ತು ಅಂಶದ ಬೇಡಿಕೆಗಳ ಬಗ್ಗೆ ಸತತವಾಗಿ ಪ್ರಚಾರ ಮತ್ತು ಪ್ರಕ್ಷೋಭೆ ನಡೆಸಬೇಕೆಂದು ಕರೆ ನೀಡಿದ್ದಾರೆ.

ಹಂತ ಹಂತವಾಗಿ ಪ್ರಾದೇಶಿಕವಾಗಿ ಹಾಗೂ ರಾಜ್ಯಾದ್ಯಂತ ರೈತರ ಚಳುವಳಿಯ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ನಿರ್ದೇಶನವೀಯುತ್ತದೆ.

ವಿವಿಧ ಬೇಡಿಕೆಗಳ ಬಗ್ಗೆ ಮುಖ್ಯ ಮಂತ್ರಿಗಳ ಜೊತೆ ನಡೆದ ಮಾತು ಕತೆಗಳಲ್ಲಿ ಈ ಕೆಳಗಿನಂತೆ ಭರವಸೆ ನೀಡಲಾಗಿದೆ.

1. ಬರಗಾಲದ ಪರಿಹಾರ ಕಾರ್ಯಕ್ರಮ ಮುಂದುವರಿಕೆ :

ಸಂಬಂಧಪಟ್ಟ ಇಲಾಖೆಗಳಿಂದ ವರದಿ ತರಿಸಿ ಮಂತ್ರಿ ಮಂಡಲ ಸೂಕ್ತ ಕ್ರಮ ಕೈಗೊಳ್ಳುತ್ತದೆ. ಕಾಮಗಾರಿ ಕೆಲಸಗಳ ವೆಚ್ಚದ ಬಗ್ಗೆ ಮಾಡುವ ಮೊತ್ತವನ್ನು ಕೆಲಸದ

(8ನೇ ಪುಟ ನೋಡಿ)

'ಗೂರ್ಖಾಲ್ಯಾಂಡ್' ಚಳುವಳಿ – ಸಾಮ್ರಾಜ್ಯಶಾಹಿ ಷಡ್ಯಂತ್ರದ ಶಿಶು

ಕಳೆದ ಏಪ್ರಿಲ್ ತಿಂಗಳಿಂದ ಬಂಗಾಳದ ಡಾರ್ಜಿಲಿಂಗ್‌ನಲ್ಲಿ ನಡೆಯುತ್ತಿರುವ 'ಗೂರ್ಖಾಲ್ಯಾಂಡ್' ಚಳುವಳಿ ಭಾರತವನ್ನು ಛಿದ್ರಗೊಳಿಸಲು ಅಮೇರಿಕನ್ ಸಾಮ್ರಾಜ್ಯಶಾಹಿಗಳು ನಡೆಸಿಕೊಂಡು ಬಂದಿರುವ ಪಿತೂರಿಯ ಕೂಸು. ಈ ಚಳುವಳಿಯನ್ನು ನಡೆಸುತ್ತಿರುವ 'ಗೂರ್ಖಾ ರಾಷ್ಟ್ರೀಯ ವಿಮೋಚನಾ ರಂಗ' ದ ಹೆಸರಿನಲ್ಲೇ ಅದರ ಪ್ರತ್ಯೇಕವಾದಿ ಮತ್ತು ವಿಭಜನವಾದಿ ಆಕಾಂಕ್ಷೆ ಸ್ಪಷ್ಟವಾಗಿ ಕಾಣಿಸಿಕೊಂಡಿದೆ. ಗೂರ್ಖಾಗಳದ್ದೇ ಒಂದು ಪ್ರತ್ಯೇಕ ರಾಷ್ಟ್ರೀಯತೆ ಇದೆಯೆಂಬವಾದ ಮತ್ತು ಅವರನ್ನು ಭಾರತದಿಂದ ವಿಮೋಚನೆಗೊಳಿಸಬೇಕೆಂಬ ಉದ್ದೇಶ ಈ ಹೆಸರಿನಲ್ಲೇ ಅಡಕವಾಗಿದ್ದರೂ ಕಾಂಗ್ರೆಸ್ (ಐ) ಸರಕಾರ ಮತ್ತು ಪ್ರಧಾನಿ ರಾಜೀವ್ ಗಾಂಧಿಯವರಿಗೆ ಈ ಚಳುವಳಿ ಅಪಾಯರಹಿತವಾಗಿ ಕಂಡು ಬಂದುದು ಶೋಚನೀಯ. ದೇಶದಲ್ಲಿ ಅಸ್ಥಿರತೆಯುಂಟು ಮಾಡಿ ಆ ಮೂಲಕ ಭಾರತದ ಐಕ್ಯತೆಯನ್ನು ಒಡೆಯುವ ಮತ್ತು ಅದರಲ್ಲೂ ಈಶಾನ್ಯ ಭಾರತದ ರಾಜ್ಯಗಳನ್ನು ಭಾರತದ ಒಕ್ಕೂಟದಿಂದ ಬೇರ್ಪಡಿಸುವ ಸಾಮ್ರಾಜ್ಯಶಾಹಿಗಳ ಪಿತೂರಿಗೆ ಗೂರ್ಖಾ ಲ್ಯಾಂಡ್ ಚಳುವಳಿ ತಾಳ ಹಾಕುತ್ತಿದೆ.

ಪ್ರಾಜೆಕ್ಟ್ ಬ್ರಹ್ಮಪುತ್ರ

ಈಶಾನ್ಯ ಭಾರತದಲ್ಲಿ ಹಲವಾರು ವರ್ಷಗಳಿಂದ ಅಮೇರಿಕಾದ ಸಿ. ಐ. ಎ ಕೈವಾಡ ನಡೆಯುತ್ತಿದೆ. ಜುಲೈ 12 1979 ರಂದು ಅಮೇರಿಕಾ ಸಂಯುಕ್ತ ಸಂಸ್ಥಾನದ ಇನ್‌ಫಾರ್ಮೇಶನ್ ಖಾತೆ ಕಳುಹಿಸಿರುವ ಕುಖ್ಯಾತ ಸುತ್ತೋಲೆಯೇ 'ಪ್ರಾಜೆಕ್ಟ್ ಬ್ರಹ್ಮಪುತ್ರ' ಯೋಜನೆಗೆ ಒದಗಿಸಲಾಗಿರುವ ನೀಲಿನಕಾಶೆ. ಇದರನ್ವಯ ಅಮೇರಿಕದ ಸ್ಟೇಟ್ ಡಿಪಾರ್ಟ್‌ಮೆಂಟಿನ ಅನುಮೋದನೆಯೊಂದಿಗೆ ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯದ 'ವಿಶೇಷ ಕಾರ್ಯಾಚರಣೆ ಸಂಶೋಧಕ ಕಚೇರಿ (Special Operation Research Office–SORO), ಸಿಕ್ಕಿಂ ಮತ್ತು ಭೂತಾನವನ್ನು ಒಳಗೊಂಡಂತೆ ಭಾರತದ ಪೂರ್ವ ರಾಜ್ಯಗಳಲ್ಲಿ ಸಮಾಜಶಾಸ್ತ್ರೀಯ ಸಂಶೋಧನೆಗಳನ್ನು ನಡೆಸಲು ನೆರವು ನೀಡುವಂತೆ ಸಿ. ಐ. ಎ. ಯನ್ನು ಕೇಳಿಕೊಂಡಿತ್ತು. ಈ ಸಂಶೋಧನೆಗಳ ಉದ್ದೇಶವೇನು ? "ಈ ಪ್ರದೇಶದಲ್ಲಿನ ರಾಜ್ಯಗಳ ಈಗಿನ ಸ್ಥಾನಮಾನ ಎಷ್ಟರ ಮಟ್ಟಿಗೆ ಸ್ವೀಕಾರಾರ್ಹವಾಗಿದೆ ಅಥವಾ ಹೊಸ ರಾಜ್ಯಗಳ ರಚನೆಯೇನಾದರೂ ಸದ್ಯದ ಸಮಸ್ಯೆಯಾಗಿರುವ ಲಕ್ಷಣಗಳಿವೆಯೇ ಎಂಬ ಕುರಿತು ಈ ಪ್ರದೇಶದ ಸಾರ್ವಜನಿಕ ಅಭಿಪ್ರಾಯದ ಮೇಲೆ ಬೆಳಕು ಚೆಲ್ಲುವುದು." ಇದರ ಅರ್ಥ ಸಂಕ್ಷಿಪ್ತವಾಗಿ, ಪೂ. ಭಾರತದಲ್ಲಿ ಅಂದರೆ ಪ. ಬಂಗಾಳ, ಅಸ್ಸಾಮ್, ಮತ್ತು ತ್ರಿಪುರಾಗಳಲ್ಲಿನ ಪ್ರತಿಗಾಮಿ ಮತ್ತು ಪ್ರತ್ಯೇಕವಾದಿ ಶಕ್ತಿಗಳನ್ನು ಗುರುತಿಸಿ ಸ್ವತಂತ್ರ ರಾಜ್ಯಗಳ ರಚನೆಗಾಗಿ ಚಳುವಳಿ ನಡೆಸುವಂತೆ ಪ್ರಚೋದನೆ ನೀಡುವುದು ಎಂದಲ್ಲವೇ ? ಬೇರೆ ದೇಶಗಳಲ್ಲಿ ನಡೆಸಿದ ಇಂತಹ ಸಂಶೋಧನೆಗಳಿಂದ ಅಮೇರಿಕಕ್ಕೆ ತುಂಬಾ ಅನುಕೂಲವಾಗಿದೆಯೆಂದೂ ಭಾರತದಲ್ಲೂ ಈ ಬಗೆಯ ಸಂಶೋಧನೆ ಅಮೇರಿಕ ಸಂಯುಕ್ತ ಸಂಸ್ಥಾನದ ಪ್ರಭಾವವನ್ನು ಬೆಳೆಸಿಕೊಳ್ಳಲು ನೆರವಾಗುವುದೆಂದೂ 'ಪ್ರಾಜೆಕ್ಟ್ ಬ್ರಹ್ಮಪುತ್ರ'ದಲ್ಲಿ ಬಹಿರಂಗವಾಗಿಯೇ ಹೇಳಿಕೊಳ್ಳಲಾಗಿದೆ ! ಇಂತಹ ದುರುದ್ದೇಶಪೂರಿತ 'ಸಂಶೋಧನೆ' ನಡೆಸುವಲ್ಲಿ 'ಪ್ರಾಜೆಕ್ಟ್ ಬ್ರಹ್ಮಪುತ್ರ' ವೇ ಮೊದಲನೆಯದಲ್ಲ. ಸ್ವಾತಂತ್ರ್ಯಾನಂತರದ ಕೆಲವೇ ವರ್ಷಗಳಲ್ಲಿ ಸಿ. ಐ. ಎ. ಇಂತಹ ಅನೇಕ ಸಂಶೋಧಕರನ್ನು ಭಾರತಕ್ಕೆ ಕಳುಹಿಸಿ ಜನರ ಭಾವನೆಗಳನ್ನು ಬಡಿದೆಬ್ಬಿಸಬಲ್ಲ ಧರ್ಮ, ಜಾತಿ ಜನಾಂಗ, ಭಾಷೆ ಮತ್ತು ಪ್ರದೇಶ ಇತ್ಯಾದಿಗಳ ಕುರಿತು ಹಲವಾರು ಸಂಶೋಧನೆಗಳನ್ನು ನಡೆಸಿರುವುದು ಎಲ್ಲರಿಗೂ ಗೊತ್ತು. ಉದಾಹರಣೆಗೆ 1950ರ ದಶಕದಲ್ಲೇ ಅಮೇರಿಕದ ಖ್ಯಾತ ಲೇಖಕರಲ್ಲೊಬ್ಬರಾದ ಸೆಲಿಂಗ್. ಟಿ. ಹ್ಯಾರಿಸನ್ ಎಂಬುವರು ತನ್ನ 'ಇಂಡಿಯಾ ದಿ ಮೋಸ್ಟ್ ಡೇಂಜರಸ್ ಡಿಕೇಡ್ಸ್' ಎಂಬ ಪುಸ್ತಕದಲ್ಲಿ ಭಾರತವು ನುಚ್ಚುನೂರಾಗಿ ಒಡೆದು ಹೋಗುವುದೆಂದೂ ಅದಕ್ಕೆ ಅಸ್ಸಾಮಿಗಳ ಭಾಷಾ ವ್ಯಾಮೋಹವೇ ಮುಖ್ಯ ಕಾರಣವಾಗುವುದೆಂದೂ ಭವಿಷ್ಯ ನುಡಿದಿದ್ದರು.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಚೀನೀ ಸಂಜಾತರಾದ ಅಮೇರಿಕನ್ ಬುದ್ಧಿಜೀವಿಯೊಬ್ಬರಿದ್ದಾರೆ. ಇವರ ಹೆಸರು ಲೀ ರಾಸ್. ಇವರು "ಹಿಮಾಲಯನ್ ಗಡಿ ರಾಷ್ಟ್ರಗಳ ಯೋಜನೆ" ಎಂಬ ಸಂಶಯಾಸ್ಪದ ಯೋಜನೆಯೊಂದರ ನಿರ್ದೇಶಕರಂತೆ. ಇವರು ನಡೆಸಿದ ಒಂದು ಸಂಶೋಧನೆಯ ಪ್ರಕಾರ "ಭಾರತದ ಈಶಾನ್ಯ ಪ್ರದೇಶದಲ್ಲಿ ಮಿತಿ ಮೀರಿದ ಸಶಸ್ತ್ರ ದಂಗೆಗಳುಂಟಾಗುವ ಸಾಧ್ಯತೆ ಇದೆ ; ಮತ್ತು ಅಂತಹ ಸಂದರ್ಭದಲ್ಲಿ ನೇಪಾಲ, ಭೂತಾನ್ ಮತ್ತು ಸಿಕ್ಕಿಂನಂತಹ ಹಿಮಾಲಯನ್ ರಾಜ್ಯಗಳ ಒಕ್ಕೂಟದ ರಚನೆಯೊಂದು ವಾಸ್ತವಿಕತೆಯಾದೀತು." ಇದರ ಅರ್ಥವನ್ನು ವಿವರಿಸಿ ಹೇಳಬೇಕಾಗಿಯೇ ಇಲ್ಲ. ಲೀ ರಾಸ್ ಅವರ "ಹಿಮಾಲಯನ್ ಗಡಿ ರಾಷ್ಟ್ರಗಳ ಯೋಜನೆ"ಗೆ ಅಮೇರಿಕದ ರಕ್ಷಣಾ ಖಾತೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಮೂಲಕ ಅಪಾರ ಹಣ ನೀಡಿದೆಯೆಂದು 1967 ರಲ್ಲಿ ಅಮೇರಿಕದ ಪತ್ರಿಕೆಗಳೇ ಪ್ರಕಟಿಸಿದ ಮೇಲೆ ಭಾರತ ಸರಕಾರ ಬಹಳ ತಡವಾಗಿ ಸಂಶೋಧನೆ ಮುಂದುವರಿಸಲು ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡಿತ್ತು. ಆದರೆ ಅಷ್ಟರಲ್ಲೇ ಡಾ|| ಲೀ ರಾಸ್ ತಮ್ಮ ಕುತ್ಸಿತ ಉದ್ದೇಶಕ್ಕೆ ಬೇಕಾಗುವ ಎಲ್ಲ ಮಾಹಿತಿಯನ್ನು ಸಂಗ್ರಹಿಸಿದ್ದರು.

"ಪ್ರಾಜೆಕ್ಟ್ ಬ್ರಹ್ಮಪುತ್ರ' ದಲ್ಲಿ ನೀಡಲಾಗಿರುವ ನಿರ್ದೇಶನಗಳನ್ನನುಸರಿಸಿ ಅಮೇರಿಕಾದ ಸಮಾಜ ವಿಜ್ಞಾನಿಯೊಬ್ಬರು 'ಈಶಾನ್ಯ ಭಾರತದಲ್ಲಿ ವಲಸೆ ಸಮಸ್ಯೆಯ ಅಧ್ಯಯನ' ವೆಂಬ ಲೇಖನ ಬರೆದು ಅದರಲ್ಲಿ ಪೂರ್ವ ಬಂಗಾಳದಿಂದ ಅಸ್ಸಾಮಿಗೆ ಏಳು ಮಿಲಿಯನ್ ಜನ ವಲಸೆ ಬಂದಿದ್ದರೆಂಬ ಕಪೋಲಕಲ್ಪಿತ ಅಂದಾಜು ನೀಡಿದ್ದರು. ಅಸ್ಸಾಂ ಚಳುವಳಿ ಹಿಂಸಾತ್ಮಕವಾಗುವುದಕ್ಕೆ ಈ ಉತ್ಪ್ರೇಕ್ಷಿತ ವರದಿ ಬಹುಪಾಲು ಕಾರಣ.

ಮೆಸಾಚುಸೆಟ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅಂತರ ರಾಷ್ಟ್ರೀಯ ಫೋರ್ಡ್ ಫೌಂಡೇಶನ್ನಿನ ಪ್ರಾಧ್ಯಾಪಕರಾಗಿರುವ ಮೈರಾನ್ ವೀನರ್ ಎಂಬ ಇನ್ನೊಬ್ಬ ಸಂಶೋಧಕರು ಮೂರು ವರ್ಷಕಾಲ ಭಾರತದಲ್ಲಿದ್ದು 197?ರಲ್ಲಿ "ಮಣ್ಣಿನ ಮಕ್ಕಳು-ಭಾರತದಲ್ಲಿ ವಲಸೆ ಮತ್ತು ಜನಾಂಗೀಯ ಸಂಘರ್ಷ" ಎಂಬ ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಪೌರತ್ವದ ಪ್ರಶ್ನೆಯನ್ನು ಚರ್ಚಿಸಿರುವ ಅವರು ಒಂದೇ ರಾಷ್ಟ್ರದ ಪೌರತ್ವ ಇಲ್ಲಿನ ಜನರ ಅವಶ್ಯಕತೆಗಳನ್ನು ಪೂರೈಸಲಾರದೆಂದೂ ಜನ ಬೇರೆ ಬೇರೆ ಜನಾಂಗೀಯ ಘಟಕಗಳಿಗಾಗಿ ಒತ್ತಾಯಿಸುವುದು ಅನಿವಾರ್ಯವೆಂದೂ ಸಾಧಿಸಲು ಪ್ರಯತ್ನಿಸಿದ್ದಾರೆ. ಅಂದರೆ ಈ ಪ್ರದೇಶದ ಜನ ಭಾರತ ಒಕ್ಕೂಟದೊಳಗೇ ಉಳಿದರೆ ಅವರು ಸದಾಕಾಲ ಹಿಂದುಳಿದವರಾಗಿಯೇ ಇರಬೇಕಾಗುತ್ತದೆ ಮತ್ತು ಅವರ ಪ್ರಗತಿ ಎಂದೂ ಸಾಧ್ಯವಿಲ್ಲವೆಂಬ ಭಾವನೆಗೆ ಬಹಿರಂಗ ಪ್ರಚೋದನೆ. ಇಂತಹ ಎಲ್ಲ 'ಸಂಶೋಧನೆ' ಗಳ ಮೂಲಕ ಈ ಬುದ್ಧಿವಂತರು ಭಾರತದಲ್ಲಿ ವಿದ್ರೋಹಕಾರಿ ಚಟುವಟಿಕೆಗಳಿಗೆ ಪ್ರೇರಣೆ ನೀಡಬಲ್ಲ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿ ಸಿ ಐ ಎ. ಗೆ ಕೊಡುತ್ತಿದ್ದಾರೆ. ಅಸ್ಸಾಂ, ತ್ರಿಪುರ ಮಿಜೋರಾಂ, ಮಣಿಪುರ ಮತ್ತು ಇದೀಗ ಗೂರ್ಖಾಲ್ಯಾಂಡ್‌ನ ಹೆಸರಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಸಿ ಐ ಎ ನ ಈ ಕುತಂತ್ರದ ಅವಿಭಾಜ್ಯ ಅಂಗವಾಗಿ ನಡೆಯುತ್ತಿವೆ. ಇದರ ಹಿಂದಿರುವುದು ಸಾಮ್ರಾಜ್ಯಶಾಹಿಗಳ ಕರಾಳ ಹಸ್ತ. ಇವನ್ನು ಗುರುತಿಸಲಾರದ ನಮ್ಮ ಕೇಂದ್ರ ಸರಕಾರ ಮತ್ತು ಪ್ರಧಾನಿಯನ್ನು ಒಳಗೊಂಡಂತೆ ಎಲ್ಲ ಕಾಂಗ್ರೆಸ್ ಧುರೀಣರೂ ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿದ್ದಾರೆ. ಇವರ ಕೈಯಲ್ಲಿ ದೇಶದ ಐಕ್ಯತೆ ಮತ್ತು ಸಮಗ್ರತೆ ಉಳಿದೀತೇ?

ಅಮೇರಿಕದ ಇನ್ನೊಬ್ಬ ಸಂಶೋಧಕ ಜೇನ್ ಸಿರ್ಲ್ ಪ್ಯಾಟ್ರಿಕ್ 19 8 ರಲ್ಲೇ ಭಾರತವು 1978ರ ಒಳಗಾಗಿ ಛಿದ್ರ ಛಿದ್ರವಾಗುವುದೆಂದು ಭವಿಷ್ಯ ನುಡಿದಿದ್ದರು. ಇದನ್ನನುಸರಿಸಿ ಗೂರ್ಖಾಲ್ಯಾಂಡ್ ಚಳುವಳಿಯ ನಾಯಕ ಸುಭಾಷ್ ಘೀಸಿಂಗ್ 1987 ರ ಅಂತ್ಯದೊಳಗೆ ಪ್ರತ್ಯೇಕ ಗೂರ್ಖಾಲ್ಯಾಂಡನ್ನು ಪಡೆಯುವುದು ಖಂಡಿತವೆಂದಿದ್ದಾನೆ ! ಗೂರ್ಖಾಲ್ಯಾಂಡನ್ನು ಪ್ರತ್ಯೇಕ ರಾಷ್ಟ್ರವಾಗಿ ಪರಿಗಣಿಸುವಂತೆ ಆತ ಸಂಯುಕ್ತ ರಾಷ್ಟ್ರ ಸಂಘ, ಅಮೇರಿಕಾ ಸಂಯುಕ್ತ ಸಂಸ್ಥಾನ, ಬ್ರಿಟನ್ ಮತ್ತು ಪಾಕಿಸ್ಥಾನಗಳಿಗೆ ಪತ್ರ ಬರೆದಿದ್ದಾನೆ ಕೂಡ.

ಭಾರತದ ಸೇನೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ಹೊಂದಿರುವವರು ಸಿಖ್ಖರು ಮತ್ತು ಗೂರ್ಖಾಗಳು. ಸಿಖ್ಖರ ನಡುವೆ ಉಗ್ರಗಾಮಿಗಳನ್ನು ಸೃಷ್ಟಿಸಿ ಅವರಿಗೆ ತರಬೇತು ನೀಡಿ ಪ್ರತ್ಯೇಕ ಖಾಲಿಸ್ತಾನಕ್ಕಾಗಿ ಪಿತೂರಿ ನಡೆಸಿದ ಸಾಮ್ರಾಜ್ಯಶಾಹಿಗಳು ಇದೀಗ ಗೂರ್ಖಾಗಳನ್ನು ಅದೇ ರೀತಿ ಪ್ರಚೋದಿಸುತ್ತಿದ್ದಾರೆ. ಭಾರತೀಯ ಸೇನೆಯಲ್ಲಿರುವ ಗೂರ್ಖಾಗಳು ಸೈನ್ಯವನ್ನು ತ್ಯಜಿಸಿ ಪ್ರತ್ಯೇಕ ಗೂರ್ಖಾ ರಾಷ್ಟ್ರದ ನಿರ್ಮಾಣಕ್ಕಾಗಿ ಆತ್ಮ ಬಲಿದಾನ ಮಾಡಲು ಮುಂದೆ ಬರಬೇಕೆಂದು ಸುಭಾಷ್ ಘೀಸಿಂಗ್ ಕರೆ ನೀಡಿದ್ದಾನೆ. ರಕ್ಷಣಾ ಪಡೆಗಳಲ್ಲಿರುವ ಗೂರ್ಖಾಗಳು ನಾಗರಿಕ ಆಡಳಿತೆಯ ಆಜ್ಞೆಗಳನ್ನು ಪರಿಪಾಲಿಸಕೂಡದೆಂದು ಆತ ಅಣತಿಯಿತ್ತಿದ್ದಾನೆ. ಇಂತಹ ರಾಷ್ಟ್ರದ್ರೋಹದ ಕರೆ ನೀಡಿ ಗೂರ್ಖಾ ಲ್ಯಾಂಡ್ ಚಳುವಳಿಯ ಮುಖಂಡರು ಮಾಡಿರುವ ಭಾಷಣದ ಟೇಪ್‌ಗಳನ್ನು ಪ. ಬಂಗಾಳ ಸರಕಾರ ಈಗಾಗಲೇ ಕೇಂದ್ರ ಸರಕಾರಕ್ಕೆ ಒಪ್ಪಿಸಿದೆ. ಇಷ್ಟಾದ ಮೇಲೂ ರಾಜೀವ್ ಗಾಂಧಿ ಗೂರ್ಖಾ ಲ್ಯಾಂಡ್ ಚಳುವಳಿ ರಾಷ್ಟ್ರವಿರೋಧಿಯೆಂದು ಹೇಳಲು ಸಿದ್ಧರಾಗಿಲ್ಲ !

ಕಾರ್ಮಿಕರಿಗೆ ವೇತನ ಹೆಚ್ಚಳ

ದ. ಕನ್ನಡ ಜಿಲ್ಲೆಯ ಪ್ರಖ್ಯಾತ ಸ್ಪ್ರಿಂಗ್ ಪ್ಲೇಟ್ ತಯಾರಿಕಾ ಸಂಸ್ಥೆಯಾದ ಕೆನರಾ ವರ್ಕ್‌ಶಾಪ್ ಕಾರ್ಮಿಕರಿಗೆ ತಾ||13-9-89 ರಂದು ಆದ ಒಪ್ಪಂದದನ್ವಯ ಹೆಚ್ಚಿನ ವೇತನ ಇತ್ಯಾದಿ ಸವಲತ್ತುಗಳು ದೊರೆಯಲಿವೆ. ಈ ಒಪ್ಪಂದದ ಪ್ರಕಾರ ಪ್ರತೀ ಕೆಲಸಗಾರನು ಈಗ ಸಿಗುವ ವೇತನದ ಮೇಲೆ ಕನಿಷ್ಠ ರೂ.340 ರಿಂದ ರೂ. 400 ರ ವರೆಗೆ ಹೆಚ್ಚಿಗೆ ಪಡೆಯಲಿದ್ದಾರೆ. ಕಾರ್ಮಿಕರು ಪ್ರಥಮ ಜಾರಿಗೆ ಮಂಗಳೂರು ಬೆಲೆ ಸೂಚ್ಯಂಕವನ್ನು ಆಧಾರವಾಗಿಟ್ಟುಕೊಂಡು ಪ್ರತೀ ತಿಂಗಳು 600 ಪ್ವಾಂಟಿಗೆ ರೂ. 1-50 ರಂತೆ ತುಟ್ಟಿಭತ್ತೆಯನ್ನು ಪಡೆಯಲಿದ್ದಾರೆ. ಅಲ್ಲದೆ, 10 ದಿನಗಳ ಕ್ಯಾಜುಯೆಲ್ ರಜೆಯಲ್ಲದೆ, ವಾಶಿಂಗ್ ಎಲವೆನ್ಸ್ ಹಾಗೂ ಇನ್ನಿತರ ಸವಲತ್ತುಗಳನ್ನು ಪಡೆಯಲಿದ್ದಾರೆ.

ಒಪ್ಪಂದಕ್ಕೆ ಮೇನೇಜ್‌ಮೆಂಟಿನ ಪರವಾಗಿ ಮೇನೇಜಿಂಗ್ ಡೈರೆಕ್ಟರ್ ಶ್ರೀ ಎಸ್. ವಿ. ಕುಡ್ವ, ಶ್ರೀ ಅರವಿಂದ ಉಪಾಧ್ಯ, ಶ್ರೀ ಹರಿರಾವ್ ಶೆಣೈ ಮತ್ತು ಶ್ರೀ ಎಸ್. ಎಸ್. ರವಿಚಂದ್ರ ರಾವ್, ಸಹಿ ಹಾಕಿದ್ದಾರೆ. ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜನಿಯರಿಂಗ್ ವರ್ಕರ್ಸ್ ಯೂನಿಯನ್ನಿನ ಪರವಾಗಿ ಶ್ರೀ ಪಿ. ರಾಮಚಂದ್ರರಾವ್, ಶ್ರೀ ಕೆ. ಮೂಸಬ್ಬ ಶ್ರೀ ಪಿ. ಉಮೇಶ್ ಬಂಡಾರಿ, ಶ್ರೀ ಸದಾನಂದ ಮೊದಲಾದವರು ಹಾಗೂ ಕರ್ನಾಟಕ ಆಟೋಮೋಬೈಲ್ ವರ್ಕರ್ಸ್ ಯೂನಿಯನ್ನಿನ ಪದಾಧಿಕಾರಿಗಳು ಸಹಿ ಹಾಕಿದ್ದಾರೆ.

ಕಾರ್ಮಿಕರ ಹಕ್ಕುಗಳ ಮೇಲೆ ಕೇಂದ್ರ ಸರ್ಕಾರದ ಹೊಸ ಧಾಳಿ : ಪ್ರತಿಭಟನೆ

ಕಳೆದ ಸೆಪ್ಟಂಬರ್ 22, 23ರಂದು ನವದೆಹಲಿಯಲ್ಲಿ ನಡೆದ ಸ್ಟಾಂಡಿಂಗ್ ಲೇಬರ್ ಕಮಿಟಿ ಸಭೆಯು ಕಲಾಪಗಳು ರಾಜೀವಗಾಂಧಿಯವರ ಸರ್ಕಾರವು ನಮ್ಮ ದೇಶದ ಕಾರ್ಮಿಕ ವರ್ಗದ ಮತ್ತು ಕಾರ್ಮಿಕ ಸಂಘಗಳ ಮೇಲೆ ಆಕ್ರಮಣಕಾರಿ ದಾಳಿಯನ್ನು ನಡೆಸಲು ಸನ್ನಾಹ ಮಾಡುತ್ತಿರುವುದನ್ನು ತೋರಿಸಿದೆ. ಅದಕ್ಕೆ ಅನುಸಾರವಾಗಿ ಕೇಂದ್ರ ಸರ್ಕಾರದ ಕಾರ್ಮಿಕ ಸಚಿವ ಪಿ. ಎ. ಸಂಗ್ಮಾ 25-10-86ರಂದು ಹೈದರಾಬಾದಿನಲ್ಲಿ ಮಾತನಾಡುತ್ತಾ ಕೈಗಾರಿಕಾ ಬಾಂಧವ್ಯಗಳ ಆಯೋಗವನ್ನು ಶೀಘ್ರವೇ ರಚಿಸುವುದಾಗಿಯೂ ಕೈಗಾರಿಕಾ ವಿವಾದಗಳ ಕಾಯಿದೆಯನ್ನು ತಿದ್ದುಪಡಿ ಮಾಡುವುದಾಗಿಯೂ ಹೇಳಿದ್ದಾರೆ.

ಇಂಡಿಯನ್ ಟ್ರೇಡ್ ಯೂನಿಯನ್ಸ್ ಆಕ್ಟ್ ಮತ್ತು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ಗಳನ್ನು ಕಾರ್ಮಿಕ ವಿರೋಧಿ ನಿಟ್ಟಿನಲ್ಲಿ ತಿದ್ದುಪಡಿ ಮಾಡಿ ಕೈಗಾರಿಕಾ ಬಾಂಧವ್ಯಗಳ ಆಯೋಗ ಎಂಬ ಸೂಪರ್ ಬಾಡಿಯನ್ನು ಕೇಂದ್ರ ಸರ್ಕಾರವು ಕಾರ್ಮಿಕರ ಮೇಲೆ ಹೇರಲು ಹೊರಟಿದೆ.

ಈ ಉದ್ದೇಶಿತ ತಿದ್ದುಪಡಿಗಳಾದರೆ ಅನೇಕ ವರ್ಷಗಳ ಹೋರಾಟ, ತ್ಯಾಗ, ಬಲಿದಾನಗಳಿಂದ ಗಳಿಸಿರುವ ಸಂಘಟನಾ ಹಕ್ಕು, ಸಾಮೂಹಿಕ ಚೌಕಾಸಿಯ ಹಕ್ಕು, ಮುಷ್ಕರದ ಹಕ್ಕು ಮೊದಲಾದ ಟ್ರೇಡ್ ಯೂನಿಯನ್ ಹಕ್ಕುಗಳು ಇಲ್ಲವಾಗುತ್ತವೆ. ಯಾವುದೇ ಕೈಗಾರಿಕಾ ಸಂಸ್ಥೆಯಲ್ಲಿ ಶೇ. 25 ರಷ್ಟು ಕಾರ್ಮಿಕರು ಒಂದಾದರೆ ಮಾತ್ರ ಕಾರ್ಮಿಕ ಸಂಘವನ್ನು ರಚಿಸಲು ಸಾಧ್ಯವಾಗುತ್ತದೆ ಎಂದರೆ ಸಂಘಟನಾ ಹಕ್ಕಿಗೆ ಚ್ಯುತಿ. ಕಾರ್ಮಿಕ ಸಂಘಗಳಲ್ಲಿ ಹೊರಗಿನವರು ಪದಾಧಿಕಾರಿಗಳಾಗಿರುವುದರ ಮೇಲೆ ನಿರ್ಬಂಧವನ್ನು ಹೇರಲಾಗುತ್ತದೆ. ಇಂದು ಕೆಲಸದಲ್ಲಿರುವ ಪದಾಧಿಕಾರಿ ಕೆಲಸದಿಂದ ವಜಾ ಆದರೆ ಅವರು ಹೊರಗಿನವರಾಗುತ್ತಾರೆ.

ಒಂದು ಕೈಗಾರಿಕಾ ಸಂಸ್ಥೆಯಲ್ಲಿರುವ ಕಾರ್ಮಿಕರಲ್ಲಿ ಶೇ. 75ರಷ್ಟು ಕಾರ್ಮಿಕರು ಒಪ್ಪಿದರೆ ಮಾತ್ರ ಮುಷ್ಕರ ಮಾಡಬಹುದು ಎಂದರೆ ಶೇ. 26 ರಷ್ಟು ಅಲ್ಪ ಸಂಖ್ಯಾತರು ಬಹುಮತದ ತೀರ್ಮಾನವನ್ನು ವೀಟೋ ಮಾಡಬಹುದು ಒಂದು ವೇಳೆ ಎಲ್ಲಾ ಕಾರ್ಮಿಕರೂ ಮುಷ್ಕರ ಮಾಡಲು ತೀರ್ಮಾನಿಸಿದರೂ ಕೈಗಾರಿಕಾ ಬಾಂಧವ್ಯಗಳ ಆಯೋಗವು ವಿವಾದವನ್ನು ಕೈಗೆತ್ತಿಕೊಂಡರೆ ಮುಷ್ಕರ ಮಾಡುವಂತಿಲ್ಲ.

ಮಾನ್ಯತೆ ಮತ್ತು ಪ್ರಾತಿನಿಧ್ಯಗಳನ್ನು ನಿರ್ಧರಿಸಲು ಚೆಕ್ ಆಫ್ ಪದ್ಧತಿಯನ್ನು ಕಡ್ಡಾಯ ಮಾಡುವುದರಿಂದ ಮಾಲೀಕರಿಗೆ ಬೇಕಾದ ಐ.ಎನ್.ಟಿ.ಯು.ಸಿ.ಯನ್ನು ಕಾರ್ಮಿಕರ ಮೇಲೆ ಹೇರಲಾಗುವುದು. ಕೇಂದ್ರ ಸರಕಾರ ಈ ಹಿಂದೆ ನ್ಯಾಷನಲ್ ಕಮಿಷನ್‌ನ ಶಿಫಾರಸುಗಳನ್ನು ಕಾರ್ಮಿಕ ಸಂಘದ ಮೇಲೆ ಹೇರಲು ಪ್ರಯತ್ನ ಪಟ್ಟಾಗ, ಬಹುತೇಕ ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ವಿರೋಧಿಸಿದ್ದರಿಂದ ಅದನ್ನು ಹಿಮ್ಮೆಟ್ಟಿಸಲಾಯಿತು.

ರಾಜೀವಗಾಂಧಿಯವರ ಹೊಸ ಆರ್ಥಿಕ ನೀತಿ ದೇಶದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸುತ್ತದೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ, ದೇಶದ ಸಮಗ್ರತೆಯನ್ನು ಒಡೆಯಲು ಅವಕಾಶ ಮಾಡಿಕೊಡುತ್ತದೆ ಮಾತ್ರವಲ್ಲ ಕಾರ್ಮಿಕರ ವೇತನ ಹೋರಾಟಗಳಿಗೂ ಧಕ್ಕೆ ತರುತ್ತದೆ. ಕಾರ್ಮಿಕರು ಒಂದಾಗಿ ಈ ನೀತಿಯ ವಿರುದ್ಧ ಹೋರಾಡುವುದನ್ನು ತಡೆಗಟ್ಟಲು ರಾಜೀವಗಾಂಧಿಯವರ ಸರಕಾರ ಪುನಹ ಕಾರ್ಮಿಕ ವಿರೋಧಿ ಕಾನೂನುಗಳನ್ನು ಈಗ ಆರಂಭವಾಗುವ ಚಳಿಗಾಲದ ಲೋಕಸಭೆಯಲ್ಲಿ ತರಲು ಹವಣಿಸುತ್ತಿದೆ. ಇದನ್ನು ಸಿ.ಐ.ಟಿ.ಯು, ಮತ್ತಿತರ ಕಾರ್ಮಿಕ ಸಂಘಗಳ ಜೊತೆ ಸೇರಿ ಹಿಮ್ಮೆಟ್ಟಿಸಬೇಕಾಗಿದೆ.

ದೆಹಲಿಯಲ್ಲಿ ಅಕ್ಟೋಬರ್ 21, 22ರಲ್ಲಿ ನಡೆದ ಸಾರ್ವಜನಿಕ ಕ್ಷೇತ್ರದ ಅಖಿಲ ಭಾರತ ಸಮಾವೇಶನವೂ ಸಹ ಕೇಂದ್ರ ಸರಕಾರದ ಕಾರ್ಯಕ್ರಮಗಳನ್ನು ವಿರೋಧಿಸಬೇಕೆಂದು ತೀರ್ಮಾನಿಸಿದೆ.

ಈ ಹಿನ್ನೆಲೆಯಲ್ಲಿ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ ತಾರೀಖು 31-10-1986ರಂದು ರಾಜ್ಯಾದ್ಯಂತ ಪ್ರತಿಭಟನಾ ದಿನವನ್ನಾಗಿ ಆಚರಿಸಬೇಕೆಂದು ಕರೆ ನೀಡಿದೆ.

ಈ ಕರೆಯ ಕಾರ್ಯಕ್ರಮವನ್ನು ಜಾರಿ ಮಾಡಲು ಬೆಂಗಳೂರು ಜಿಲ್ಲಾ ಸಮಿತಿ 31-10-1986ರಂದು ಮೆರವಣಿಗೆ ಧರಣಿಯನ್ನು ಏರ್ಪಡಿಸಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆ ಹೋಗಿ ರಾಜಭವನದ ಮುಂದೆ ಧರಣಿ ನಡೆಸಲಾಗುವುದು. ನಗರದ ಎಲ್ಲಾ ಕಾರ್ಮಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಐಕ್ಯ ಹೋರಾಟ ನಡೆಸಿ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಎದುರಿಸಬೇಕಾಗಿದೆ.

○

ಹರ್ಯಾಣ ಎಸ್. ಎಫ್. ಐ. ರಾಜ್ಯಾಧ್ಯಕ್ಷರ ಭೀಕರ ಕೊಲೆ

ಎಸ್. ಎಫ್. ಐ. ಹರ್ಯಾಣ ರಾಜ್ಯಸಮಿತಿ ಅಧ್ಯಕ್ಷರೂ, ಕೇಂದ್ರ ಸಮಿತಿ ಸದಸ್ಯರೂ ಆದ ಕಾ. ಜಸ್‌ಬೀರ್‌ಸಿಂಗ್‌ರನ್ನು ಕುರುಕ್ಷೇತ್ರ ವಿ.ವಿ. ಆವರಣದಲ್ಲಿ ಲೋಕದಳದ ವಿದ್ಯಾರ್ಥಿ ಸಂಘಟನೆಯಾದ ಛಾತ್ರಸಭಾ ಕಾರ್ಯಕರ್ತರು 23-10-86 ರಂದು ಭೀಕರವಾಗಿ ಕೊಲೆ ಮಾಡಿದ ದಾರುಣ ಘಟನೆ ನಡೆದಿದೆ. ಅಂದು ನಡೆದ ಘರ್ಷಣೆಯಲ್ಲಿ ಎಸ್. ಎಫ್. ಐ. ರಾಜ್ಯ ಸಮಿತಿ ಸದಸ್ಯ ಕಾ. ಸುಮೇರ್ ಸಿಂಗ್ ಅಲ್ಲದೆ ಕಾನೂನು ವಿಭಾಗದ ರೀಡರ್ ಡಾ. ಎಸ್. ಕೆ. ಸಿಂಗ್ ಅವರೂ ಗಾಯಗೊಂಡಿದ್ದಾರೆ. ಎಸ್. ಎಫ್. ಐ.ನ ಓರ್ವ ಕೇಂದ್ರ ನಾಯಕರೇ ಈ ರೀತಿ ಭೀಕರವಾಗಿ ಕೊಲೆಯಾಗಿರುವುದು ಇದೇ ಪ್ರಥಮವಾಗಿದೆ. ವಿ. ವಿ. ಯನ್ನು ಅನಿರ್ದಿಷ್ಟಾವಧಿಗೆ ಮುಚ್ಚಲಾಗಿದೆ. ಘರ್ಷಣೆಯ ಕಾರಣ ಇನ್ನೂ ತಿಳಿದು ಬಂದಿಲ್ಲ.

ಪಂಜಾಬ್‌ನ ಖಾಲಿಸ್ತಾನ ಚಳವಳಿ, ಪಂಜಾಬ್ ಒಪ್ಪಂದ ವಿರುದ್ಧ ಕೋಮುವಾದಿ ಭಾವನೆಗಳನ್ನು ಕೆರಳಿಸಲು ನಡೆಯುತ್ತಿರುವ ಪ್ರಯತ್ನಗಳು ಇತ್ಯಾದಿಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಜಾತ್ಯಾತೀತ ನೆಲೆಯಲ್ಲಿ ವಿದ್ಯಾರ್ಥಿಗಳ ಬಲಿಷ್ಠ ಚಳವಳಿಯನ್ನು ಸಂಘಟಿಸುತ್ತಿದ್ದ ಕಾಮ್ರೇಡ್ ಜಸ್‌ಬೀರ್‌ಸಿಂಗ್ ಸಂಘಟನೆಯ ಧ್ಯೇಯಕ್ಕಾಗಿ ಹೋರಾಡಿ ತನ್ನ ಪ್ರಾಣತ್ಯಾಗ ಮಾಡಿದ್ದಾರೆ. 26-10-86 ರಂದು ಸಭೆ ಸೇರಿದ ಎಸ್. ಎಫ್. ಐ. ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಅಗಲಿದ ಹುತಾತ್ಮ ಸಂಗಾತಿಗೆ ಶ್ರದ್ಧಾಂಜಲಿ ಅರ್ಪಿಸಿತು. ಶ್ರದ್ಧಾಂಜಲಿ ಸಂದೇಶವನ್ನು ಹರ್ಯಾಣ ರಾಜ್ಯ ಸಮಿತಿಗೆ ಕಳಿಸಲಾಗಿದೆ.

ಈ ಭೀಕರ ಕೊಲೆಯನ್ನು ಪ್ರತಿಭಟಿಸಿ ಅಪರಾಧಿಗಳನ್ನು ಶಿಕ್ಷಿಸಲು ಒತ್ತಾಯಿಸಿ 6-11-86 ರಂದು ರಾಜ್ಯಾದ್ಯಂತ ಸಭೆ ಮೆರವಣಿಗೆಗಳನ್ನು ನಡೆಸಬೇಕು ಹಾಗೂ ಹರ್ಯಾಣ ಸರಕಾರಕ್ಕೆ ತಂತಿ ಸಂದೇಶ ನೀಡಲು ರಾಜ್ಯಸಮಿತಿ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

○

ದಾವಣಗೆರೆಯಲ್ಲೊಂದು ಭಿತ್ತಿ ಚಿತ್ರ ಕಾರ್ಯಾಗಾರ

"ಒಂದು ಎರಡು ಮೂರು, ಹಾರಿದವು ಪಾರಿವಾಳಗಳು ನೂರು. ಬಂದೂಕಿನ ಬಾಯಿಗೆ ಬಟ್ಟೆಯ ಚೂರು...."

ನಾಲ್ಕು ವರ್ಷದ ಪುಟ್ಟ ಹುಡುಗಿ ಹಾಡುತ್ತಿದ್ದಳು. "ಯಾರು ಹೇಳಿಕೊಟ್ಟರು ನಿನಗೆ?" ಕೇಳಿದೆ. ಸಂಕೋಚದಿಂದ ಮುದುಡಿದಳು. ನಾಚಿಕೆಯ ನಗೆ ನಕ್ಕಳು ಹುಡುಗಿ.

'ನಮಗೆ ಯುದ್ಧ ಬೇಡ ಶಾಂತಿ ಬೇಕು, ನಮ್ಮನ್ನು ಬದುಕಲು ಬಿಡಿ ಸಮರ ನಿಷೇಧದಿಂದ ಬಾಳು ಬೆಳಗೀತು....' ಮೊದಲಾದ ಶಾಂತಿ ಸಂದೇಶಗಳನ್ನು ಹೊತ್ತ ಪಾರಿವಾಳಗಳು ಹಾರಾಡುತ್ತಿದ್ದವು. ಆಗಸದ ತುಂಬ ಸ್ವಚ್ಛ ಗಾಳಿ. ಭೂಮಿಯನ್ನು ಬಂಜೆಯಾಗಿಸುವತ್ತ ನಡೆದಿರುವ ಅಣು ಸಮರಕ್ಕೆ ತಡೆಯೊಡ್ಡುವ ತವಕ. ಎದೆಗಳಲ್ಲಿ ತಿದಿಯೊತ್ತುವ ಶಾಂತಿಯ ಬಯಕೆ ಬಂದೂಕಿನ ಬಾಯಿಗೆ ಬಟ್ಟೆಗಿಡುಗುವಂತೆ ಪ್ರೇರೇಪಿಸುತ್ತಿತ್ತು.

ಸಮರ ಸನ್ನಾಹದ ಸುಳಿವಿನಲ್ಲಿ ಸುಂದರ ಸೃಷ್ಟಿಯ ನಗು, ಚೆಲುವು, ಸಮೃದ್ಧತೆಗಳ ವಿನಾಶದ ಕುರುಹುಗಳನ್ನು ಕಲ್ಪಿಸಿಕೊಂಡ ಕಣ್ಣುಗಳು ಕ್ಯಾನವಾಸ್, ಕುಂಚಗಳನ್ನಿಡಿದು 'ಸೃಷ್ಟಿಯನ್ನು ಸಂರಕ್ಷಿಸಿ' ಭಿತ್ತಿ ಚಿತ್ರಗಳನ್ನು ರಚಿಸಿದವು.

ಸಮುದಾಯದ 'ನೂರು ಅಡಿಬಣ್ಣಗಳ ನಡೆ, ಅಣು ಸಮರಕ್ಕೆ ಜನತೆಯ ತಡೆ' ಬೃಹತ್ ತೈಲ ಚಿತ್ರ ದಾವಣಗೆರೆಗೆ ಆಗಮಿಸುವ ಮುನ್ನ ಪೂರ್ವಭಾವಿಯಾಗಿ ಒಂದು ಭಿತ್ತಿ ಚಿತ್ರ ಕಾರ್ಯಾಗಾರವನ್ನು ಪುಟಾಣಿಗಳು, ಚಿತ್ರಕಲಾ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮೊನ್ನೆ ಗಾಂಧಿ ಜಯಂತಿಯಂದು ದಾವಣಗೆರೆ ನಗರಸಭಾ ಆವರಣದಲ್ಲಿ ನಡೆಸಿಕೊಟ್ಟರು.

ದಾವಣಗೆರೆಯ ಸಮುದಾಯ ಮಿತ್ರರಾದ ಸೊಲಬಕ್ಕನವರ್, ಕರಿಂರಾಜು, ಯಾಕೂಬ್, ಲಕ್ಷ್ಮೀನಾರಾಯಣಭಟ್ ಇವರುಗಳು ಯೋಜಿಸಿದ್ದ ಈ ಕಾರ್ಯಾಗಾರದಲ್ಲಿ ನಿರೀಕ್ಷೆಗೂ ಮೀರಿ ಭಿತ್ತಿ ಚಿತ್ರಗಳು ಸೃಷ್ಟಿಯಾದವು. ಪುಟಾಣಿಗಳೂ ಸೇರಿದಂತೆ 80 ಕಲಾವಿದರು ಚಿತ್ರಗಳನ್ನು ರಚಿಸಿದರು. 'ರೆಕ್ಕೆ ಬಿಚ್ಚಿ ಪಾರಿವಾಳಗಳೇ ಯುದ್ಧ ನಾಡಿನಲ್ಲಿ' ಫಲಕಗಳು ನೋಡಿದವರ ಎದೆಗಳಲ್ಲಿ ತೂಗಾಡಿದವು.

ಒಂದೇ ಕಾಲು ಭೂಮಿಗೆ. ಉಳಿದುದೆಲ್ಲ ಹೊರಕ್ಕೆ. ಬಾಂಬು ಹಿಡಿದ ಕೈ. ಉಸಿರು ನಿಲ್ಲಿಸುವ ಕಣ್ಣುಗಳು. ಎರಡು ಕ್ಷಣಗಳಲ್ಲಿ ಇನ್ನು ಎಲ್ಲೂ ನಿಶ್ಯಬ್ಧ. ಬಾಂಬು ಹಿಡಿದ ಕೈಯನ್ನೊಳಗೊಂಡೂ ವಿಶ್ವದ ಉಸಿರು ಸ್ತಬ್ಧ.... ಈ ಆಶಯ ಹೊತ್ತ ಕಲಾವಿದ ಎಸ್. ಜಗದೀಶಕುಮಾರ್ ಅವರ ಚಿತ್ರ ಹಲವು ಕಣ್ಣುಗಳನ್ನು ಕಾಡಿತು.

ಅಣುಬಾಂಬಿನ ತುಟಿಯಲ್ಲಿ ಭೂಮಿ ತಿರುಗುತ್ತಿದೆ. ಸೂರ್ಯನ ಹಿಡಿತದಿಂದಲ್ಲ....ಇನ್ನೊಂದು ಚಿತ್ರದ ಅಭಿವ್ಯಕ್ತಿ ಇದು.

ಪುಟಾಣಿಯೊಬ್ಬಳು ಹೀಗೆ ಚಿತ್ರಿಸಿದ್ದಾಳೆ—ಬಾಂಬು ಬೀಳುತ್ತಿದೆ. ಪಾರಿವಾಳಗಳು ಹಾರುತ್ತವೆ. ಪುಟ್ಟ ಕೈಗಳು ಬಾಂಬು ಬೀಳುವುದರ ತಡೆಯಲೆತ್ನಿಸುತ್ತಿವೆ. ಮೂಲೆಯಲ್ಲಿ ಇಣುಕುತ್ತಾನೆ ಸೂರ್ಯ.

ಹೀಗೆ ಹಲವಾರು ಚಿತ್ರಗಳಲ್ಲಿ ಯುದ್ಧ ಘೋರತೆಯ ನಡುವೆ ರೆಕ್ಕೆ ಬಿಚ್ಚಿದ ಪಾರಿವಾಳಗಳ ಶಾಂತಿ ಹಂಬಲದ ಅನುಭವ ಮನವರಿಕೆಯಾಗುತ್ತದೆ.

ಬೆಂಗಳೂರೇತರ ನಗರಗಳಲ್ಲೂ ಕಲೆಯ ದಟ್ಟ ಅಭಿವ್ಯಕ್ತಿ ಹುದುಗಿಕೊಂಡಿದೆ ಎನ್ನುವುದನ್ನು ದಾವಣಗೆರೆಯ ಕಲಾವಿದರು ತೋರಿಸಿಕೊಟ್ಟಿದ್ದಾರೆ. ಸೊಲಬಕ್ಕನವರ್ ಹಾಗು ಕರಿಂರಾಜು ಇವರುಗಳಿಂದ ಶಾಂತಿ ವರ್ಷಕ್ಕೆಂದೇ ಚಿತ್ರಿಸಲ್ಪಟ್ಟಿರುವ ಬೃಹತ್ ಕ್ಯಾನವಾಸ್ ಇನ್ನೇನು ದಾವಣಗೆರೆಯನ್ನು ತಲುಪಲಿದೆ. 'ಶಾಂತಿಯ ಪಾರಿವಾಳಗಳೇ ಎದ್ದೇಳಿ, ಅನ್ನ ಕೂಳಿಗಾಗಿ ಹಲುಬುವ ಕಂದಮ್ಮಗಳನ್ನು ಕಾಪಾಡಿ' ಘೋಷಣೆ ಹೊತ್ತು ಬಣ್ಣದ ನಡೆ ನಡೆಯಲಿದೆ.

'ಮನಕುಲ ಉಳಿದರೆ ಹೂಗಳು ಅರಳಿ ನದಿಯು ಹರಿವುದು ನಿರಂತರ ಹಕ್ಕಿ ಹಾಡುವುದು, ಮಗುವು ನಗುವುದು, ಬದುಕು ನಗ್ನವಾಗದು ಬಾನೆತ್ತರ' ಸಂಕೇತದ ಜೊತೆಗೆ 'ಬಾಂಬು ಹಿಡಿದ ಕೈಗಳ ಬೆರಳುಗಳಿಗೆ ಗೆಜ್ಜೆ ಕಟ್ಟುವ ಕಾಲ ಬಂತು ಹತ್ತಿರ ಹತ್ತಿರ' ಎನ್ನುವ ಆಶಯವನ್ನೂ ಜನರ ಕಿವಿಗಳಲ್ಲಿ ಮೊಳಗಿಸಲಿದೆ.

—ಬಿ. ಎಸ್. ಮಲ್ಲೇಶ್

(ಸ್ವಾತಿ ಸಿಂಡಿಕೇಟ್ಸ್)

ಕಲ್ಲು ಮುಳ್ಳಿನ ದಾರಿಯಲ್ಲಿ ಹಾದುಬಂದ ನಮ್ಮ ಕಾರ್ಯಕ್ರಮ

ಕಲ್ಲು ಮುಳ್ಳಿನ ಹಾದಿಯನ್ನು ತುಳಿದು ಹತ್ತಾರು ವರ್ಷಗಳ ಸೈದ್ಧಾಂತಿಕ ಹೋರಾಟದಿಂದ ಪಕ್ವವಾದ ನಮ್ಮ ಕಾರ್ಯಕ್ರಮ ಅಂತಿಮ ರೂಪು ಪಡೆದದ್ದು ಅಕ್ಟೋಬರ್ 31 ರಿಂದ ನವಂಬರ್ 7ರ ವರೆಗೆ ನಡೆದ ೭ನೇ ಮಹಾಧಿವೇಶನದಲ್ಲಿ.

ಕಾ. ಬಸವ ಪುನ್ನಯ್ಯನವರು ಬರೆದ 'ಸಿ. ಪಿ. ಐ. (ಎಂ)ನ ಕಾರ್ಯಕ್ರಮದ ಬಗ್ಗೆ' ಎಂಬ ಪುಸ್ತಕದಿಂದ ಆರಿಸಿದ ಭಾಗಗಳನ್ನು ಇಲ್ಲಿ ನೀಡಲಾಗಿದೆ.

ಕಮ್ಯುನಿಸ್ಟ್ ಪಕ್ಷಕ್ಕೆ ಒಬ್ಬ ಸದಸ್ಯನನ್ನು ಸೇರಿಸಿಕೊಳ್ಳಲು ಎರಡು ಆಧಾರಗಳು- ಒಂದು, ಅವರು ಪಕ್ಷದ ಕಾರ್ಯಕ್ರಮವನ್ನು ಸ್ವೀಕರಿಸಬೇಕು; ಎರಡು, ಅವರು ಪಕ್ಷದ ಸಂವಿಧಾನಕ್ಕೆ ಬದ್ಧರಾಗಿರಲು ಒಪ್ಪಬೇಕು. ಇದು ಎಲ್ಲರಿಗೂ ತಿಳಿದಿರುವ ಮಾರ್ಕ್ಸ್‌ವಾದಿ ಲೆನಿನ್‌ವಾದಿ ಪರಿಕಲ್ಪನೆ. ಆದರೆ ಇದನ್ನು ಚರ್ಚಿಸಲಿಲ್ಲ; ಪಕ್ಷದ ಕಾರ್ಯಕ್ರಮವಾಗಿ ಅದು ಉಪಯೋಗಕ್ಕೂ ಬರಲಿಲ್ಲ.

ಹೀಗೆ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಕೆಲವು ಅಂಶಗಳ ಬಗ್ಗೆ ಆಗಾಗ್ಗೆ ಅಂಗೀಕರಿಸುತ್ತಾ ಬಂದ ನಿರ್ಣಯಗಳು ಹೇಳಿಕೆಗಳ ಆಧಾರದ ಮೇಲೆನೇ

> ## ಜನರ ಮುಂದಿಟ್ಟ ಕಾರ್ಯಕ್ರಮ
>
> ಭಾರತ ಕಮ್ಯುನಿಸ್ಟ್ ಪಕ್ಷವು ಈ ಕಾರ್ಯಕ್ರಮವನ್ನು ಜನರ ಮುಂದಿಡುತ್ತದೆ. ಹಾಗೂ ಪ್ರಜಾಸತ್ತಾತ್ಮಕವಾಗಿ ರಾಷ್ಟ್ರೀಯ ಮುನ್ನಡೆಯನ್ನು ಸಾಧಿಸುವ ದಿಸೆಯಲ್ಲಿ ಹೋರಾಟ ನಡೆಸಿರುವ ಜನತೆಗೆ ತಮ್ಮ ಉದ್ದೇಶದ ಬಗ್ಗೆ ಸ್ಪಷ್ಟ ಚಿತ್ರ ನೀಡಲು, ಇಂದಿನ ದಿನದ ಪ್ರಮುಖ ತುರ್ತು ಕರ್ತವ್ಯಗಳನ್ನು ನಿರೂಪಿಸುತ್ತದೆ.
>
> — ಪಕ್ಷದ ಕಾರ್ಯಕ್ರಮದಿಂದ

ಭಾರತ ಕಮ್ಯುನಿಸ್ಟ್ ಪಕ್ಷದ ಇತಿಹಾಸದ ಒಂದು ಗಮನಾರ್ಹ ಸಂಗತಿಯೆಂದರೆ ಒಂದು ಕಾರ್ಯಕ್ರಮ ಅಥವಾ ಸಂವಿಧಾನ ಅಥವಾ ಎರಡೂ ಇಲ್ಲದೇನೇ ಪಕ್ಷಕ್ಕೆ ಸದಸ್ಯರನ್ನು ಬಹಳ ವರ್ಷಗಳಿಂದ ಸೇರಿಸಿಕೊಳ್ಳುತ್ತಾ ಬರಲಾಯಿತು. ಇದು ಪಕ್ಷ ಯಾತ ಕಲ್ಲು ಮುಳ್ಳಿನ ದಾರಿಯಿಂದ ಹಾದು ಈಗಿರುವ ಮಟ್ಟಕ್ಕೆ ಬಂದಿದೆ ಎಂಬುದನ್ನು ತೋರಿಸುತ್ತದೆ.

ಸಿ. ಪಿ. ಐ. (ಎಂ)ನ ಕೇಂದ್ರ ಸಮಿತಿಯ ಠರಾವಿನ ಪ್ರಕಾರ ಭಾರತ ಕಮ್ಯೂನಿಸ್ಟ್ ಪಕ್ಷ 1920-21ರಲ್ಲಿ ಸ್ಥಾಪನೆಗೊಂಡಿತು. (ಸಿ. ಪಿ. ಐ. ಪ್ರಕಾರ 1925ರಲ್ಲಿ). 60-66 ವರ್ಷಗಳ ಈ ಇತಿಹಾಸದಲ್ಲಿ 22 ವರ್ಷಗಳ ಹಿಂದೆ ಕಲಕತ್ತೆಯಲ್ಲಿ ಅಕ್ಟೋಬರ್ 31 ರಿಂದ ನವಂಬರ್ 7ರ ವರೆಗೆ ನಡೆದ ಏಳನೇ ಮಹಾಧಿವೇಶನ ಅಂಗೀಕರಿಸಿದ ಕಾರ್ಯಕ್ರಮ ಒಂದು ಪ್ರಮುಖ ಮೈಲಿಗಲ್ಲು ಎಂದರೆ ಅತಿಶಯೋಕ್ತಿಯೇನಲ್ಲ.

"ಕರಡು ವೇದಿಕೆ"

1920 ರವರೆಗೆ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಕೆಲವು ಅಂಶಗಳ ಬಗ್ಗೆ ರಾಜಕೀಯ ಹೇಳಿಕೆಗಳು ಘೋಷಣೆಗಳು ಇದ್ದವೇ ಹೊರತು ಪೂರ್ಣ ಕಾರ್ಯಕ್ರಮದ ಒಂದು ಕರಡು ಕೂಡಾ ಇರಲಿಲ್ಲ. 1928 ರಲ್ಲಿ 'ಕಾರ್ಯಾಚರಣೆಯ ಕರಡು ವೇದಿಕೆ' ಎಂಬ ಕರಡು ತಯಾರಾಯಿತು. ಆದರೆ ಪಕ್ಷದ ಯಾವುದೇ ಸಮ್ಮೇಳನವಲ್ಲಾಗಲೀ, ಅಧಿವೇಶನವಲ್ಲಾಗಲಿ,

ಪಕ್ಷ ಕಾರ್ಯನಿರ್ವಹಿಸುತ್ತಾ ಬಂತು. ಸಹಜವಾಗಿಯೇ ಬಹಳ ವರ್ಷಗಳ ಕಾಲ ಒಂದು ಅಧಿಕೃತ ಕಾರ್ಯಕ್ರಮದ ಅಭಾವ ಪಕ್ಷದ ಐಕ್ಯತೆ ಹಾಗೂ ಬೆಳವಣಿಗೆಯನ್ನು, ಜೊತೆಗೆ ಭಾರತದಲ್ಲಿ ಕ್ರಾಂತಿಕಾರಿ ಚಳುವಳಿಯ ಬೆಳವಣಿಗೆಯನ್ನು ಕುಂಠಿತಗೊಳಿಸಿತು. ಇದಕ್ಕೆ ಕಾರಣಗಳು ಹಲವಾರು. ಒಂದು ಪ್ರಮುಖ ಕಾರಣವೆಂದರೆ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ಭಾರತೀಯ ಬಂಡವಾಳಶಾಹೀ ವರ್ಗದ ಪಾತ್ರದ ವಿಶ್ಲೇಷಣೆಯ ಬಗ್ಗೆ ವಾದ-ವಿವಾದ. ಇದೇ ವಾದ-ವಿವಾದ ಈಗಲೂ ಸಿ.ಪಿ.ಐ. ಹಾಗೂ ಸಿ.ಪಿ.ಐ. (ಎಂ)ನ ನಡುವೆ ಮುಂದುವರಿಯುತ್ತಿದ್ದು ಭಾರತದ ಹೊಸ ಪ್ರಭುತ್ವ ಹಾಗೂ ಸರ್ಕಾರದ ವರ್ಗ ಸ್ವಭಾವವೇನು ಎಂಬುದರ ಬಗ್ಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಅನುಯಾಯಿಗಳ ನಡುವೆ ತೀವ್ರ ಭಿನ್ನಾಭಿಪ್ರಾಯ ಕಮ್ಯೂನಿಸ್ಟ್ ಆಂದೋಲನವನ್ನು ಬಾಧಿಸುತ್ತಲೇ ಇದೆ ಎಂಬುದನ್ನು ನಮಗೆ ತಿಳಿದ ವಿಷಯ.

1951ರ ಕಾರ್ಯಕ್ರಮ

1947ರಲ್ಲಿ ರಾಜಕೀಯ ಅಧಿಕಾರದ ವರ್ಗಾವಣೆಯ ವರ್ಗ ವಿಶ್ಲೇಷಣೆಯ ಸುತ್ತಮುತ್ತ ಪಕ್ಷದೊಳಗೆ ಆಂತರಿಕ ಹೋರಾಟ ಹಲವು ಘಟ್ಟಗಳಲ್ಲಿ ನಡೆಯಿತು. ಹೊಸದಾಗಿ ಪಡೆದ ಸ್ವಾತಂತ್ರ್ಯ, ಭಾರತದ ಕ್ರಾಂತಿಯಲ್ಲಿ ಪಕ್ಷದ ಮುಂದಿನ ಗುರಿಗಳು ಎಂಬ ಬಗ್ಗೆ ಕೇಂದ್ರ ಸಮಿತಿ ಒಂದು ನಿರ್ಣಯ ಅಂಗೀಕರಿಸಿತು. ಮಾರ್ಚ್ 1948 ರಲ್ಲಿ ನಡೆದ ಎರಡನೇ ಮಹಾಧಿವೇಶನ ಅದರಲ್ಲಿನ ಸುಧಾರಣಾವಾದೀ ಹಾಗೂ ಪರಿಷ್ಕರಣವಾದೀ ಅಂಶಗಳನ್ನು ತಿರಸ್ಕರಿಸಿ, ಇನ್ನೊಂದು ಅಲೆಯತ್ತ ಅಂದರೆ ಎಡ-ಪಂಥವಾದೀ ನಿರೂಪಣೆ ನೀಡಿತು.

ಜೂನ್ 1950 ರಲ್ಲಿ ಕೇಂದ್ರ ಸಮಿತಿ ಎರಡನೇ ಮಹಾಧಿವೇಶನದ ಈ ತೀರ್ಮಾನದ ಪುನರ್ವಿಮರ್ಶೆ ನಡೆಸಿ ಎಡ-ಪಂಥವಾದೀ ತಪ್ಪುಗಳನ್ನು ಗುರುತಿಸಿದರೂ ಮೂಲಭೂತವಾಗಿ ಈ ಸಮಿತಿಯ ನಿರ್ಣಯ ಕೂಡಾ ಅದೇ ಅಚ್ಚಿನಲ್ಲಿ ಮುಂದುವರೆಯಿತು. ಇದಾದ ನಂತರ 1951ರ ಮೊದಲ ಭಾಗದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಒಂದು ನಿಯೋಗ ಸ್ಟಾಲಿನ್ ನೇತೃತ್ವದ ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ ನಿಯೋಗದೊಂದಿಗೆ ಚರ್ಚೆ ನಡೆಸಿತು. ಈ ಚರ್ಚೆಯ ತೀರ್ಮಾನಗಳನ್ನು 1951 ರಲ್ಲಿ ಪ್ರಕಟಿಸಿದ ಪಕ್ಷದ ಮೊದಲ ಕಾರ್ಯಕ್ರಮದ ಕರಡಿನಲ್ಲಿ ಅಳವಡಿಸಲಾಯಿತು. 1951ರಲ್ಲಿ ನಡೆದ ಒಂದು ವಿಶೇಷ ಸಮ್ಮೇಳನದಲ್ಲಿ ನಂತರ 1953ರಲ್ಲಿ ನಡೆದ ಪಕ್ಷದ ಮೂರನೇ ಮಹಾಧಿವೇಶನದಲ್ಲಿ ಇದನ್ನು ಅಂಗೀಕರಿಸಲಾಯಿತು.

> ## ಜನತಾ ಪ್ರಜಾಪ್ರಭುತ್ವ ರಂಗ
>
> ಕಾರ್ಯಕ್ರಮದಲ್ಲಿ ನಿರೂಪಿಸಿದ ತುರ್ತು ಕರ್ತವ್ಯಗಳನ್ನು ಪೂರೈಸಲು, ಆ ಉದ್ದೇಶ ಸಾಧನೆಗಾಗಿ ದಶಲಕ್ಷಗಟ್ಟಲೆ ದುಡಿಯುವ ಜನರು ಕಾರ್ಮಿಕ ವರ್ಗ ರೈತ ಸಮುದಾಯ. ದುಡಿಯುವ ಬುದ್ಧಿ ಜೀವಿಗಳು ಮಧ್ಯಮ ವರ್ಗ ಮತ್ತು ನೈಜವಾದ ಪ್ರಜಾಪ್ರಭುತ್ವ ಬೆಳವಣಿಗೆಯಲ್ಲಿ ಒಂದು ಸಮೃದ್ಧವಾದ ಜೀವನವನ್ನು ಸೃಷ್ಟಿಸುವುದರಲ್ಲಿ ಆಸಕ್ತಿ ಇರುವ ರಾಷ್ಟ್ರೀಯ ಬಂಡವಾಳಗಾರರು – ಇವರೆಲ್ಲರಿಗೂ ಐಕ್ಯಕ ಜನತಾ ಪ್ರಜಾಪ್ರಭುತ್ವ ರಂಗದಲ್ಲಿ ಒಂದುಗೂಡಲು ನಮ್ಮ ಪಕ್ಷವು ಕರೆಕೊಡುತ್ತದೆ.
>
> — ಪಕ್ಷದ ಕಾರ್ಯಕ್ರಮದಿಂದ

ಆದರೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ರಂಗದಲ್ಲಿ ಕಂಡು ಬಂದ ವೇಗದ ಬೆಳವಣಿಗೆಗಳಿಂದಾಗಿ 1951ರ ಕಾರ್ಯಕ್ರಮದ ಮೂಲಭೂತ ನಿರೂಪಣೆಗಳು ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಮೂಡಿ ಬರುತ್ತಿದ್ದ ಸಮಸ್ಯೆಗಳನ್ನು ಎದುರಿಸುವಲ್ಲಿ ನೆರವಾಗುವುದು ಸಾಧ್ಯವಾಗಲಿಲ್ಲ. ಆದ್ದರಿಂದ ಜೂನ್ 1955ರಲ್ಲಿ ಕಾರ್ಯಕ್ರಮವನ್ನು ಅನೂರ್ಜಿತಗೊಳಿಸಲು ಕೇಂದ್ರ ಸಮಿತಿ ನಿರ್ಧರಿಸಿತು. ಅದರ ಫಲವಾಗಿ ಪಕ್ಷದೊಳಗೆ ಇನ್ನೊಂದು ಸುತ್ತಿನ ಸೈದ್ಧಾಂತಿಕ ಹೋರಾಟ ನಡೆಯಲಾರಂಭಿಸಿತು. ನಾಲ್ಕನೇ ಮಹಾಧಿವೇಶನ ನಡೆಯುವ ಮೊದಲು ಹಲವಾರು ಕೇಂದ್ರ ಸಮಿತಿ ಸದಸ್ಯರು ಹಾಗೂ ರಾಜ್ಯ ಸಮಿತಿಗಳ ಸದಸ್ಯರ ವಿವಿಧ 'ವೇದಿಕೆ'ಗಳು ತಮ್ಮ--ತಮ್ಮ ದಸ್ತಾವೇಜುಗಳನ್ನು ತಯಾರಿಸಿ ಚರ್ಚೆ ನಡೆಸಿದವು. ಅಧಿವೇಶನಕ್ಕೆ ಪೂರ್ಣಭಾವಿಯಾಗಿ ನಡೆದ ರಾಜ್ಯ ಸಮ್ಮೇಳನಗಳು ವಿವಿಧ ರಾಜಕೀಯ ಅಭಿಪ್ರಾಯಗಳ ತಿಕ್ಕಾಟದ ರಣರಂಗವಾದವು.

ಸೈದ್ಧಾಂತಿಕ ಹೋರಾಟ

ಏಪ್ರಿಲ್ 1956ರಲ್ಲಿ ನಡೆದ ಪಕ್ಷದ ಮಹಾಧಿವೇಶನದ ಎದುರು ಮೂರು ಭಿನ್ನ ರಾಜಕೀಯ ನಿಲುವುಗಳು ಮಂಡಿಸಲ್ಪಟ್ಟವು. ಒಂದು ಕೇಂದ್ರ ಸಮಿತಿ ಬಹುಮತದ ನಿಲುವು, ಎರಡನೆಯದು ದಿವಂಗತ ಪಿ. ಸಿ. ಜೋಷಿ, ರಾಜೇಶ್ವರರಾವ್ ಹಾಗೂ ಇತರರ ತೀರಾ ಸುಧಾರಣಾವಾದೀ ನಿಲುವು ಹಾಗೂ ಮೂರನೆಯದು ದಿವಂಗತ ಸುಂದರಯ್ಯ, ಬಸವ ಪುನ್ನಯ್ಯ, ಸುರ್ಜಿತ್, ಹನುಮಂತರಾವ್ ಹಾಗೂ ಪ್ರಸಾದ್‌ರಾವ್ ಇವರ ಪರ್ಯಾಯ ನಿಲುವು. ಇದನ್ನು ಬಹುಮತದ ನಿಲುವಿನಲ್ಲಿ ಕೆಲವು ತಿದ್ದುಪಡಿ ತಂದ ಮೇಲೆ ವಾಪಸು ಪಡೆಯಲಾಯಿತು.

ಹೀಗೆ ಮೇಲ್ನೋಟಕ್ಕೆ ಕಂಡು ಬಂದ ಸೈದ್ಧಾಂತಿಕ ಐಕ್ಯತೆ 1961 ರಲ್ಲಿ ವಿಜಯವಾಡದಲ್ಲಿ ಆರನೇ ಮಹಾಧಿವೇಶನ ನಡೆಯುವವರೆಗೂ ಮುಂದುವರಿದರೂ, ಈ ಐಕ್ಯತೆ ಎಷ್ಟೊಂದು ನಾಜೂಕಾಗಿತ್ತೆಂದರೆ ಆರನೇ ಮಹಾಧಿವೇಶನದಲ್ಲಿ ಮತ್ತೊಂದು ಸುತ್ತಿನ ಆವೇಶ ಪೂರಿತ ಚರ್ಚೆ ನಡೆಯಿತು. ಅಂತೂ ಹೇಗೋ! ಸಂಘಟನಾತ್ಮಕ ತೇಪೆ ಕೆಲಸ ಈ ಅಧಿವೇಶನದಲ್ಲಾದರೂ ಸೈದ್ಧಾಂತಿಕ ಭಿನ್ನಾಭಿಪ್ರಾಯ ಮುಂದುವರೆಯಿತು.

ಈ ನಡುವೆ ಜಾಗತಿಕ ಕಮ್ಯೂನಿಸ್ಟ್ ಆಂದೋಲನದಲ್ಲಿ ಕಂಡು ಬಂದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಮತ್ತು ಭಾರತ-ಚೀನಾ ಗಡಿ ಸಂಘರ್ಷ ಕಮ್ಯೂನಿಸ್ಟ್ ಪಕ್ಷದೊಳಗಿನ ರಾಜಕೀಯ ಸೈದ್ಧಾಂತಿಕ ಭಿನ್ನತೆಗೆ ಇನ್ನೊಂದು ಆಯಾಮ ಸೇರಿಸಿದವು. ರಾಷ್ಟ್ರೀಯ ಮಂಡಳಿಯ ಬಹುಮತದ ರಾಷ್ಟ್ರೀಯ-ಸಂಕುಚಿತವಾದೀ ನಿಲುಮೆ ಪಕ್ಷದ ವಿಭಜನೆಗೆ ನಾಂದಿ ಹಾಕಿತು. ಒಂದು ಐಕ್ಯ ಅಧಿವೇಶನವನ್ನು ನಡೆಸುವ ಎಲ್ಲಾ ಪ್ರಯತ್ನಗಳು ವಿಫಲವಾದ ನಂತರ 1964ರ ಮಧ್ಯಭಾಗದಲ್ಲಿ ತೆನಾಲಿಯಲ್ಲಿ ಒಂದು ಸಮಾವೇಶ ನಡೆದು ಪಕ್ಷ ವಿಭಜನೆಗೊಂಡಿತು.

ಕಲ್ಕತ್ತೆಯಲ್ಲಿ ನಡೆದ ಪಕ್ಷದ 7ನೇ ಮಹಾಧಿವೇಶನ ಪರಿಷ್ಕರಣವಾದ ಹಾಗೂ ಎಡ-ಪಂಥವಾದದ ತಪ್ಪುಗಳಿಲ್ಲದ ಕಾರ್ಯಕ್ರಮವನ್ನು ಅಂಗೀಕರಿಸಿತು. ಇದಾದ ಕೆಲವು ವಾರಗಳ ನಂತರ ಪರಿಷ್ಕರಣವಾದಿಗಳು ಬೊಂಬಾಯಿನಲ್ಲಿ ತಮ್ಮದೇ ಆದ ಕಾರ್ಯಕ್ರಮವನ್ನು ಅಂಗೀಕರಿಸಿದರು. ಕಳೆದ 22 ವರ್ಷಗಳ ನಮ್ಮ ದೇಶದ ಆಗುಹೋಗುಗಳ ಈ ಎರಡರಲ್ಲಿ ಯಾವುದು ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಬದ್ಧವಾಗಿದೆ, ಯಾವುದು ಸರಿಯಾದ ದಾರಿ ತೋರಿಸಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ.

ನಮ್ಮ ಪಕ್ಷದ ಕಾರ್ಯಕ್ರಮ

1964ರ ನವೆಂಬರ್ ಮೊದಲ ವಾರದಲ್ಲಿ ಸಿ.ಪಿ.ಐ. (ಎಂ) ಅಂಗೀಕರಿಸಿದ ಕಾರ್ಯಕ್ರಮವನ್ನು ವಿವರವಾಗಿ ಪರಿಶೀಲಿಸಿದರೆ ಕಾಂ. ಲೆನಿನ್‌ರವರು ಕಾರ್ಯಕ್ರಮ ರೂಪಿಸುವ ಬಗ್ಗೆ ಹಾಕಿಕೊಟ್ಟ ಮಾರ್ಗದರ್ಶನಕ್ಕೆ ಹೇಗೆ ಬದ್ಧವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕ್ರಾಂತಿಕಾರಿ ಪಕ್ಷದ ಕಾರ್ಯಕ್ರಮ ಹೇಗಿರಬೇಕು?

ಮೊದಲನೆಯದಾಗಿ, ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷದ ಕಾರ್ಯಕ್ರಮ ಕ್ರಾಂತಿಯ ಘಟ್ಟ, ಆ ಘಟ್ಟದ ಕಾರ್ಯ ಯೋಜನೆ ಹಾಗೂ ಕ್ರಾಂತಿಯ ಸ್ವರೂಪದ ಬಗ್ಗೆ ಹೇಳಬೇಕು. ಯಾಕೆಂದರೆ ಈ ಪಕ್ಷ ದುಡಿಯುವ ಜನಗಳನ್ನು ಕ್ರಾಂತಿಯತ್ತ ಮುನ್ನಡೆಸಬೇಕಾದರೆ ಅದರ ಚಳುವಳಿಯ ಘೋಷಣೆಗಳು ಜನತೆಯ ಪ್ರಜ್ಞೆಯ ಮಟ್ಟಕ್ಕೆ ಅನುಗುಣವಾಗಿರಬೇಕು. ಲೆನಿನ್‌ವಾದಿಗಳು ಕ್ರಾಂತಿಯ ಘಟ್ಟವನ್ನು ನಿರ್ಧರಿಸಲು ಮೂರು ಅಂಶಗಳನ್ನು ಪರಿಶೀಲಿಸುತ್ತಾರೆ. (1) ಪ್ರಸ್ತುತ ಯುಗದ ಲಕ್ಷಣ ಅಂದರೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸನ್ನಿವೇಶ (2) ದೇಶದ ಉತ್ಪಾದನಾ ಶಕ್ತಿಗಳು ಹಾಗೂ ಸಂಬಂಧಗಳು ಅಥವಾ ಸಾಮಾಜಿಕ ಆರ್ಥಿಕ ರಚನೆ (3) ಕಾರ್ಮಿಕ ವರ್ಗದ ಪ್ರಜ್ಞೆಯ, ಅದರ ಸಂಘಟನೆಯ ಹಾಗೂ ಇತರ ಕ್ರಾಂತಿಕಾರೀ ಶಕ್ತಿಗಳೊಂದಿಗೆ ಅದರ ಐಕ್ಯತೆಯ ಮಟ್ಟ.

—ಲೆನಿನ್ (1899)

ಸಿ.ಪಿ.ಐ. (ಎಂ)ನ ಕಾರ್ಯಕ್ರಮ ಈ ಅಂಶಗಳನ್ನು ಪರಿಶೀಲಿಸಿ, ಜಾಗತಿಕ ಕಮ್ಯುನಿಸ್ಟ್ ಆಂದೋಲನದ 1957 ಹಾಗೂ 1960ರ ಘೋಷಣೆಗಳ ತಿಳುವಳಿಕೆಯ ಹಿನ್ನೆಲೆಯಲ್ಲಿ ಭಾರತದ ಕ್ರಾಂತಿ 1947 ಆಗಸ್ಟ್‌ನಲ್ಲಿ ರಾಜಕೀಯ ಸ್ವಾತಂತ್ರ್ಯ ಪಡೆಯುವುದರೊಂದಿಗೆ ತನ್ನ ಮೊದಲನೇ ಘಟ್ಟವನ್ನು ಹಾದು, ಎರಡನೇ ಘಟ್ಟಕ್ಕೆ ಅಂದರೆ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಘಟ್ಟ ತಲುಪಿತು ಎಂದು ಹೇಳುತ್ತದೆ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ರಂಗದಲ್ಲಿ ಭಾರತದ ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು ಎಂಬುದನ್ನು ಈ ಸಂದರ್ಭದಲ್ಲಿ ಕಾರ್ಯಕ್ರಮ ನಿರೂಪಿಸುತ್ತದೆ.

> **ಬಂಡವಾಳಶಾಹಿ ಪ್ರಜಾಪ್ರಭುತ್ವ**
>
> ಬಂಡವಾಳಶಾಹಿ ಪ್ರಜಾಪ್ರಭುತ್ವವು ಯಾವಾಗಲೂ ಕೇವಲ ಶೋಷಕ ಶ್ರೀಮಂತ ವರ್ಗಕ್ಕೆ ಮಾತ್ರ ಪ್ರಜಾಪ್ರಭುತ್ವವಾಗಿ ಉಳಿಯುತ್ತದೆ. ಆದರೆ ದುಡಿದುಣ್ಣುವ ಬಡವರಿಗೆ ಅದೊಂದು ನೆರಳು ಮಾತ್ರವಾಗಿ, ಕೇವಲ ಬಾಯಿ ಮಾತಿನ ಉಪಚಾರವಾಗಿ ಪರಿಣಮಿಸುತ್ತದೆ.

ಎರಡನೆಯದಾಗಿ, ಈ ಎರಡನೇ ಘಟ್ಟದಲ್ಲಿ ನಮ್ಮನ್ನು ಆಳುವವರ ವರ್ಗ ಸ್ವಭಾವವೇನು ಎಂಬ ಪ್ರಶ್ನೆ ಕ್ರಾಂತಿಯ ಕಾರ್ಯ ಯೋಜನೆಗೆ ನೇರವಾಗಿ ಸಂಬಂಧಪಟ್ಟ ಪ್ರಶ್ನೆ. ಭಾರತದ ಕಮ್ಯುನಿಸ್ಟ್ ಆಂದೋಲನದಲ್ಲಿ ತೀವ್ರ ಚರ್ಚೆಗೆ, ಅನೈಕ್ಯತೆಗೆ ಕಾರಣವಾದ ವಿಷಯವಿದು ಎಂಬುದು ಕೂಡಾ ನಮಗೆಲ್ಲರಿಗೂ ತಿಳಿದಿದೆ. ಕಾರ್ಯಕ್ರಮ ಈ ಬಗ್ಗೆ ಏನು ಹೇಳುತ್ತದೆ ? "ಇಂದಿನ ಭಾರತೀಯ ಪ್ರಭುತ್ವವು ಬಂಡವಾಳಗಾರರ ಮತ್ತು ಜಮೀನುದಾರರ ವರ್ಗ ಆಳ್ವಿಕೆಯ ಸಂಘಟನೆಯಾಗಿದೆ. ಇದರ ನೇತೃತ್ವವನ್ನು ಹಿರೇ ಬಂಡವಾಳಗಾರರು ವಹಿಸಿದ್ದಾರೆ" ಎಂದು ಸ್ಪಷ್ಟವಾಗಿ ನಿಸ್ಸಂದಿಗ್ಧವಾಗಿ ಹೇಳುತ್ತದೆ ಸಿ.ಪಿ.ಐ. (ಎಂ) ಕಾರ್ಯಕ್ರಮ. ಈ ಆಳುವ ವರ್ಗಗಳು ವಿದೇಶೀ ಬಂಡವಾಳವನ್ನು ಒದ್ದೋಡಿಸದೆ, ಭೂ ಮಾಲಕತ್ವವನ್ನು ರದ್ದು ಮಾಡದೆ ಜಾಗತಿಕ ಬಂಡವಾಳಶಾಹಿಯ ಮೂರನೇ ಸಾರ್ವತ್ರಿಕ ಬಿಕ್ಕಟ್ಟಿನ ಈ ಸಮಯದಲ್ಲೂ ವಿದೇಶೀ ಹಣಕಾಸು ಬಂಡವಾಳದೊಂದಿಗೆ ಸಹೋದ್ಯಮ ನಡೆಸಿ ಭೂಮಾಲೀಕರೊಂದಿಗೆ ಸಖ್ಯ ಬೆಳೆಸಿ ದೇಶವನ್ನು ಬಂಡವಾಳಶಾಹೀ ಬೆಳವಣಿಗೆಯ ದಾರಿಯಲ್ಲಿ ಕೊಂಡೊಯ್ಯುತ್ತಿದೆ ಎಂಬುದನ್ನು ಕಾರ್ಯಕ್ರಮ ವಿವರಿಸುತ್ತದೆ; ಕೈಗಾರಿಕಾ ಹಾಗೂ ಕೃಷಿ ರಂಗದಲ್ಲಿ ಅನುಸರಿಸಲಾಗುತ್ತಿರುವ ಧೋರಣೆಗಳ ಕಟು ವಿಮರ್ಶೆ ಮಾಡುತ್ತದೆ.

ಕಾಂಗ್ರೆಸ್ ವಿದೇಶಾಂಗ ನೀತಿ ಕುರಿತು

ಕಾರ್ಯಕ್ರಮ ಪರಿಶೀಲಿಸುವ ಇನ್ನೊಂದು ಪ್ರಮುಖ ವಿಷಯವೆಂದರೆ ಸರಕಾರದ ವಿದೇಶಾಂಗ ನೀತಿಯ ಬಗ್ಗೆ ಕಾರ್ಮಿಕ ವರ್ಗದ ಪಕ್ಷದ ನಿಲುವು. ಯಾವುದೇ ಪ್ರಜಾಪ್ರಭುತ್ವದ ಆಂತರಿಕ ಹಾಗೂ ವಿದೇಶಾಂಗ ಧೋರಣೆಗಳು ಒಂದನ್ನೊಂದು ಅವಲಂಬಿಸಿರುತ್ತವೆ, ಏಕೆಂದರೆ ಇವೆರಡೂ ಪ್ರಭುತ್ವದ ಮೂಲಭೂತ ಹಿತಾಸಕ್ತಿಗಳನ್ನು ಸಾಧಿಸುವ ಉದ್ದೇಶ ಹೊಂದಿರುತ್ತವೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತಾ ಕಾರ್ಯಕ್ರಮ ಒಂಭತ್ತು ಪೂರ್ಣ ಪರಿಚ್ಛೇದಗಳಲ್ಲಿ (47 ರಿಂದ 55) ಭಾರತ ಸರಕಾರದ ವಿದೇಶಾಂಗ ನೀತಿಯನ್ನು ಯಾವ ಗೊಂದಲಕ್ಕೂ ಎಡೆಯಿಲ್ಲದಂತೆ ವಿಶ್ಲೇಷಿಸುತ್ತದೆ; ಭಾರತದಂತಹ ನವ ವಿಮೋಚಿತ ದೇಶದ ಬಂಡವಾಳಶಾಹಿಗೂ, ಸಾಮ್ರಾಜ್ಯಶಾಹಿಗೂ,

(6ನೇ ಪುಟ ನೋಡಿ)

> **ಮತ್ತೆ ಮತ್ತೆ ಓದಬೇಕು**
>
> ಪಕ್ಷದ ಒಬ್ಬ ಸದಸ್ಯನ ಅಥವಾ ಸಮಿತಿಯ ಪಕ್ಷದ ಕಾರ್ಯಕ್ರಮ ಕುರಿತಾದ ತಿಳುವಳಿಕೆ ಆಳವಾಗಿ ಸಾಕಷ್ಟಿಲ್ಲದಿದ್ದರೆ, ಆ ಸಂಗಾತಿ ಅಥವಾ ಸಮಿತಿ ಸಮಯದಿಂದ ಸಮಯಕ್ಕೆ ಪ್ರಶ್ನೆಯಿಂದ ಪಶ್ನೆಗೆ ಸರಿಯಾದ ಕಾರ್ಯತಂತ್ರವನ್ನು ರೂಪಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಪಕ್ಷದ ಕಾರ್ಯಕ್ರಮವನ್ನು ಹಾಗೂ ಅದರ ಪ್ರತಿಪಾದನೆಗಳನ್ನು ಮನೋಗತ ಮಾಡಿಕೊಳ್ಳಲು ಅದನ್ನು ಓದುವುದು ಮತ್ತೆ–ಮತ್ತೆ ಓದುವುದು ಅತ್ಯಗತ್ಯವಾಗುತ್ತದೆ.
>
> — ಎಂ. ಬಸವಪುನ್ನಯ್ಯ

1951 ರಿಂದ *64* ರ ವರೆಗೆ

ಕಲ್ಕತ್ತೆಯಲ್ಲಿ ನಡೆದ ಏಳನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ಕಾರ್ಯಕ್ರಮ 1951ರ ಮೊದಲ ಕಾರ್ಯಕ್ರಮದ ಹಲವಾರು ಅಂಶಗಳನ್ನು ಒಳಗೊಂಡಿತ್ತು. ಆದರೆ ಕೆಲವು ತಪ್ಪು ನಿರೂಪಣೆಗಳನ್ನು ಸರಿಪಡಿಸಿತು, ಬದಲಿಸಿತು. ಅಂತಹ ಬದಲಾವಣೆಗಳ ಪಟ್ಟಿ ಇಲ್ಲಿದೆ.

1951ರ ತಪ್ಪು ನಿರೂಪಣೆ	1964ರಲ್ಲಿ ಮಾಡಿದ ಬದಲಾವಣೆ
1) ಭಾರತೀಯ ಸ್ವಾತಂತ್ರ್ಯ ಕೇವಲ ಹೊರನೋಟಕ್ಕೆ ಮಾತ್ರ. ಕಾಂಗ್ರೆಸ್ ಸರಕಾರದ ಪ್ರತಿಷ್ಠಾಪನೆ ಕೇವಲ ಕಣ್ಕಟ್ಟು.	ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ರಾಷ್ಟ್ರೀಯ ಕಾಂಗ್ರೆಸ್–ಮುಸ್ಲಿಂ ಲೀಗ್ ನಾಯಕರ ನಡುವಿನ ರಾಜಿಯ ಪರಿಣಾಮವಾಗಿ ಅಧಿಕಾರ ಹಸ್ತಾಂತರಗೊಂಡಿತು.
2) ಅಧಿಕಾರದ ಹಸ್ತಾಂತರದ ನಂತರವೂ ಕ್ರಾಂತಿಯ ಘಟ್ಟ ಹಾಗೂ ಕಾರ್ಯಯೋಜನೆ ಬದಲಾಗಿಲ್ಲ.	ಕ್ರಾಂತಿಯ ಮೊದಲ ಘಟ್ಟ ಕೊನೆಗೊಂಡು 'ಸಾರ್ವತ್ರಿಕ ಸಂಯುಕ್ತ ರಂಗ'ದ ಹಂತ ಕೊನೆಗೊಂಡಿದೆ.
3) ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಕೆಲವು ವ್ಯಕ್ತಿಗಳನ್ನು ಹೊರತುಪಡಿಸಿ ಹಿರೇ ಅಥವಾ ಗುತ್ತೇದಾರಿ ಬೂರ್ಜ್ವಾ ವರ್ಗವೂ ಸೇರುತ್ತದೆ.	ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಮೂಲಭೂತ ಕರ್ತವ್ಯಗಳನ್ನು ಸಾಧಿಸುವುದು ಹಿರೇ ಬಂಡವಾಳಗಾರರನ್ನೂ ಅವರ ರಾಜಕೀಯ ಪ್ರತಿನಿಧಿಗಳನ್ನೂ ಸೋಲಿಸದೆ ಸಾಧ್ಯವಿಲ್ಲ.
4) ಭಾರತದ ಎಲ್ಲಾ ಭಾಷಾ–ಜನಾಂಗಗಳಿಗೂ ಸ್ವಯಂ–ನಿರ್ಧಾರದ, ಪ್ರತ್ಯೇಕಗೊಳ್ಳುವ ಹಕ್ಕು ಇದೆ.	ಇದು ಭಾರತದ ಪರಿಸ್ಥಿತಿಗೆ ಅನ್ವಯವಾಗುವುದಿಲ್ಲ. ಭಾರತದ ಐಕ್ಯತೆ ಹಾಗೂ ಅದರ ವಿವಿಧ ಭಾಷಾ–ಜನಾಂಗಗಳ ಹೋರಾಟ ಬೇರೆಯದೇ ಆದ ರೀತಿಯಲ್ಲಿ ನಡೆಸಬೇಕು.
5) "ತಟಸ್ಥತೆ"ಯು ಅಥವಾ ಅಲಿಪ್ತತೆಯು ವಿದೇಶಾಂಗ ನೀತಿ ಎರಡು ಬಣಗಳ ನಡುವೆ ನಡೆಸುವ ಒಂದು ಮೋಸದ ಆಟ.	ಅಲಿಪ್ತ ಧೋರಣೆಗೆ ಕೊಡಲಾದ ಸಾಮ್ರಾಜ್ಯಶಾಹೀ-ವಿರೋಧಿ ತಿರುವು ಅಂತರಾಷ್ಟ್ರೀಯ ಬೆಳವಣಿಗೆಯಲ್ಲಿ ಒಂದು ಸಕಾರಾತ್ಮಕ ಪಾತ್ರ ವಹಿಸಿದ್ದರೂ, ಹಿರಿಯ ಬಂಡವಾಳಶಾಹಿಯ ಪ್ರಭುತ್ವದ ನಾಯಕತ್ವದಲ್ಲಿದ್ದು ಜನವಿರೋಧಿ ಧೋರಣೆಗಳನ್ನು ಅನುಸರಿಸುತ್ತಿರುವಾಗ ಅಲಿಪ್ತ ಧೋರಣೆಯಾಗಲೀ, ಅದನ್ನು ನಿಜವಾಗಿ ಕಾರ್ಯಗತಗೊಳಿಸುವುದಾಗಲಿ ತಪ್ಪದೇ ಉಳಿಯುವುದೆಂದು ಭಾವಿಸಲಾಗದು.
6) ಜನತಾ ಪ್ರಜಾಪ್ರಭುತ್ವ ಕ್ರಾಂತಿ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ, ಅಮೆರಿಕ ಮತ್ತು ಇತರ ಸಾಮ್ರಾಜ್ಯಶಾಹಿಗಳ ವಿರುದ್ಧ ಅಲ್ಲ.	ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳ ವಿರುದ್ಧ.
7) ಬ್ರಿಟಿಶ್ ಬಂಡವಾಳವನ್ನು ಮಾತ್ರ ಕಸಿದುಕೊಳ್ಳಬೇಕು.	ಎಲ್ಲಾ ವಿದೇಶೀ ಬಂಡವಾಳವನ್ನು ಕಸಿದುಕೊಳ್ಳಬೇಕು.
8) ಭೂ ಮಾಲೀಕರಿಗೆ ಯಾವುದೇ ಪರಿಹಾರ ಕೊಡುವುದಲ್ಲ ಎಂದು ಹೇಳುವುದಿಲ್ಲ,	ಪರಿಹಾರವಿಲ್ಲದೆ ಭೂ ಮಾಲಕತ್ವವನ್ನು ರದ್ದು ಮಾಡಬೇಕೆಂದು ಹೇಳುತ್ತದೆ.
9) ಜನತಾ ಪ್ರಜಾಪ್ರಭುತ್ವ ಕ್ರಾಂತಿ ಬ್ರಿಟೀಶ್ ಸಾಮ್ರಾಜ್ಯಶಾಹಿ ಆಳ್ವಿಕೆಯ ವಿರುದ್ಧ ಮತ್ತು ಊಳಿಗಮಾನ್ಯ ಹಾಗೂ ಅರೆ–ಊಳಿಗಮಾನ್ಯ ಭೂ ಮಾಲಕತ್ವದ ವಿರುದ್ಧ.	ಜನತಾ ಪ್ರಜಾಪ್ರಭುತ್ವ ಕ್ರಾಂತಿ ಊಳಿಗಮಾನ್ಯ ವಿರೋಧಿ, ಏಕಸ್ವಾಮ್ಯ ಬಂಡವಾಳಶಾಹಿ-ವಿರೋಧಿ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿ.

ಏಡ್ಸ್ ಎಂಬ ಭಯಂಕರ ರೋಗಕ್ಕೆ ಕಾರಣರಾರು ?

ಅತೀ ಭಯಂಕರವಾದ, ಇನ್ನೂ ಉಪಶಮನ ಇಲ್ಲದ ಜಗತ್ತಿನಾದ್ಯಂತ ಹರಡುತ್ತಿರುವ ಏಡ್ಸ್ ರೋಗಕ್ಕೆ ಅಮೇರಿಕಾದ ರಕ್ಷಣಾ ಕೇಂದ್ರವಾದ 'ಪೆಂಟಗನ್' ಕಾರಣ ಎಂದು ಫ್ರೆಂಚ್ ವಿಜ್ಞಾನಿಗಳಾದ ಜಾಕೋಬ್ ಮತ್ತು ಲಿಲ್ಲಿ ಸಿಗಲ್ ಹೇಳಿದ್ದಾರೆ. ಅಮೇರಿಕಾದ ಮಿಲಿಟರಿ ಕೂಟವಾದ ಪೆಂಟಾಗನ್‌ನವರು ಜೀವಯುದ್ಧದ (ರೋಗಾಣುಗಳನ್ನು ಸೃಷ್ಟಿಸಿ ವೈರಿಗಳ ಮೇಲೆ ಬಿಡುವಯುದ್ಧ) ಪ್ರಯೋಗಕ್ಕೆ ಇದನ್ನು ತಯಾರಿಸಿದರು. ಮೇರಿಲ್ಯಾಂಡ್ ಎನ್ನುವ ಸ್ಥಳದಲ್ಲಿ, ಕೈದಿಗಳ ಮೇಲೆ ಈ ಪ್ರಯೋಗವನ್ನು ನಡೆಸಲಾಯಿತು. (ಜೀವ ಉಳಿದರೆ ಬಿಡುಗಡೆ ಮಾಡುವುದಾಗಿ ಕೈದಿಗಳಿಗೆ ಆಮಿಷವೊಡ್ಡಲಾಗಿತ್ತು. ಇವರಲ್ಲಿ ಕೆಲವು ಕೈದಿಗಳನ್ನು ನಿಯಮಿತ ಕಾಲಕ್ಕೆ ಮೊದಲೇ ಹೊರ ಬಿಡಲಾಯಿತು. ಈ ರೋಗಗ್ರಸ್ತ ಕೈದಿಗಳೇ ಈ ರೋಗದ ಹರಡುವಿಕೆಗೆ ಕಾರಣರಾದರು ಈ ರೋಗವು ಆಫ್ರಿಕಾ ಖಂಡದ ಮಂಗಗಳಿಂದ ಬಂದಿತ್ತೆನ್ನುವುದು ಸುಳ್ಳಾಗಿದೆ. ಆಫ್ರಿಕಾ ಹಾಗೂ ಯೂರೋಪಿನ ದೇಶಗಳಿಗೆ ಮೂರು ವರ್ಷಗಳ ನಂತರ ಈ ರೋಗ ಹರಡಿದೆ ಎಂದು ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ.

ಚೀನಾ ಹಾಗೂ ಪೂ. ಜರ್ಮನಿ ಸಂಬಂಧ

ಸಮಾಜವಾದೀ ದೇಶವಾದ ಪೂರ್ವ ಜರ್ಮನಿಯ ನಾಯಕ ಎರಿಕ್ ಹೊನೆಕರ್ ಅವರು ಸಮಾಜವಾದೀ ಚೀನಕ್ಕೆ ಭೇಟಿ ಕೊಟ್ಟಿರತ್ತಾರೆ ಈ ಸೌಹಾರ್ದಯುತ ಬೇಟಿಯೊಂದಿಗೆ ಚೀನಾ ಹಾಗೂ ಪೂರ್ವ ಜರ್ಮನಿಯ ಮಧ್ಯೆ ವಿಜ್ಞಾನ ಹಾಗೂ ತಾಂತ್ರಿಕ ಕ್ಷೇತ್ರ ವಿಚಾರಂದಲ್ಲಿ ಸಹಕಾರ ಏರ್ಪಡಿಸಲಿದ್ದು ಇದೊಂದು ಸಮಾಜವಾದೀ ಬೆಳವಣಿಗೆಯಲ್ಲಿ ಅತೀ ಮಹತ್ವದ ಘಟ್ಟವಾಗಿರುತ್ತದೆ. ಚೀನದ ಅಧ್ಯಕ್ಷ ಲೀ ಯವರೊಡನೆ ಮಾತನಾಡುತ್ತಾ ಹೊನ್ನೆಕರ್ ಅವರು ತಮ್ಮ ಎರಡೂ ದೇಶಗಳು ಜಾಗತಿಕ ಶಾಂತಿಯನ್ನು ಕಾಪಾಡಲು ಹೋರಾಡುವುದಾಗಿ ಹೇಳಿದರು.

ಅಮೇರಿಕಾದ ಜನತೆಗೆ ಸುಳ್ಳು ಹೇಳಲಾಗುತ್ತಿದೆ

ಸೋವಿಯತ್ ನಾಯಕ ಗೋರ್ಬಚೆವ್ ಅವರು ರೈಕಾವಿಕ್‌ನಲ್ಲಿ ನಡೆದ ಸಭೆಯಲ್ಲಿ ಸೋವಿಯತ್ ದೇಶ ತುಂಬಾ ರಿಯಾಯಿತಿ ಕೊಟ್ಟು ಚರ್ಚೆ ಮಾಡಿದರೂ, ಅಮೇರಿಕಾದ ಅಧ್ಯಕ್ಷ ರೇಗನ್ನರು ಮಾತಿನಿಂದ ಹಿಂದೆ ಸರಿದರು ಎಂದು ಹೇಳಿದ್ದಾರೆ. ಅಮೇರಿಕಾಕ್ಕೆ ನಿಜವಾದ ಶಾಂತಿ ಮಾತುಕತೆಯಲ್ಲಿ ಆಸಕ್ತಿ ಇದೆಯೇ ಎಂದು ಶಂಕಿಸಿದರು. ಜಿನೇವಾದಲ್ಲಿ ನಡೆದ ಶೃಂಗ ಸಭೆಯಲ್ಲಿ "ಅಣುಸಮರ ನಡೆಸಬಾರದು–ಅಣುಸಮರ ಗೆಲ್ಲಲಾಗದು" ಎಂಬ ಅಂಶಕ್ಕೆ ರೇಗನ್ ಸಹಿಹಾಕಿದ್ದರು ತಾರಾ ಸಮರದ ವಿಚಾರದಲ್ಲಿ ಪಟ್ಟು ಹಿಡಿದಿರುವ ರೇಗನ್ನರು ತಮ್ಮ ಮೊದಲಿನ ಹೇಳಿಕೆಯಿಂದ ಹಿಂದೆ ಹೋದಂತೆ. ಎಂದು ಮಾಸ್ಕೋ ದೂರದರ್ಶನದಲ್ಲಿ ಮಾತನಾಡುತ್ತಾ ಗೊರ್ಬಚೆವ್ ಹೇಳಿದರು.

"ಒಪ್ಪಂದದ ಉಲ್ಲಂಘನೆಯಿಂದ ಜಾಗತಿಕ ವ್ಯವಸ್ಥೆಯಲ್ಲಿ ಒಂದು ತಾತ್ಕಾಲಿಕ ಪರಿಹಾರವೂ ಸಾಧ್ಯವಿಲ್ಲ, ರೇಗನ್ನರ ತಾರಾಸಮರ ಜಾಗತಿಕ ಶಾಂತಿಗೆ ಅಡ್ಡಿಯಾಗಿ ನಿಂತಿದೆ. ತಾರಾ ಸಮರದಿಂದ ಅಮೇರಿಕಾದ ಜನತೆಯ ರಕ್ಷಣೆಯು ನಿಶ್ಶಸ್ತ್ರವಾಗುತ್ತಿದೆ, ಸಶಸ್ತ್ರವಾಗಲಾರದು. ರೇಗನ್ನರು ಅಮೇರಿಕಾದ ಜನತೆಗೆ ಸುಳ್ಳು ಹೇಳುತ್ತಿದ್ದಾರೆ' ಎಂದು ಮುಂದುವರಿದು ಸೋವಿಯತ್ ನಾಯಕ ಗೋರ್ಬಚೆವ ಹೇಳಿದರು.

ಗೋರ್ಬಚೆವ್ ಅವರ ರೈಕಾವಿಕ್ ಭಾಷಣ, ಮಾಸ್ಕೋದಿಂದ ಟಿ.ವಿ.ಯಲ್ಲಿ ಮಾಡಿದ ಭಾಷಣದ ಸಾರಾಂಶ ಇರುವ ಪುಸ್ತಕ ಮಾಲಿಕೆ ಅಮೇರಿಕಾದೊಳಗೆ ಬರದಂತೆ ಆ "ಮುಕ್ತ" ದೇಶದ ಅಧಿಕಾರಿಗಳು ತಡೆಹಿಡಿದಿದ್ದಾರಂತೆ

ಸೋವಿಯೆತ್ ಒಕ್ಕೂಟ ಎದುರಿಸಬಲ್ಲುದು

ಜಗತ್ತನ್ನೇ ಬೆದರಿಸುತ್ತಿರುವ ಅಮೇರಿಕಾದ ತಾರಸಮರ ವ್ಯೂಹಕ್ಕೆ ತಕ್ಕ ಉತ್ತರ ಕೊಡುವುದಾಗಿ ಸೋವಿಯತ್ ಯೂನಿಯನ್ ಹೇಳಿದೆ ತಾರಾ ಸಮರ ವ್ಯೂಹವನ್ನು ನಿಷ್ಕ್ರಿಯ ಗೊಳಿಸಲು ಅತ್ಯಂತ ಕಡಿಮೆ ಖರ್ಚಿನಲ್ಲಿ ಪ್ರತಿ ವ್ಯೂಹವನ್ನು ರಚಿಸುತ್ತೇವೆಂದೂ 2ನೇ ಮಹಾಯುದ್ಧದ ನಂತರ ಅಮೇರಿಕಾದ ಎಲ್ಲಾ ಅಸ್ತ್ರಗಳಿಗೂ ಪ್ರತಿಯಸ್ತ್ರವನ್ನು ಅತೀ ಕಡಿಮೆ ಖರ್ಚಿನಲ್ಲಿ, ಪರಿಣಾಮಕಾರೀಯಾಗಿ ಮಾಡಲಾಗಿದೆ ತಾರಾ ಸಮರಕ್ಕೆ ಪ್ರತಿ ಅಸ್ತ್ರ ಮಾಡುವುದೊಂದು ಸಮಸ್ಯೆಯೇ ಅಲ್ಲ ಎಂದು ಸೋವಿಯತ್ ಯೂನಿಯನ್ ಹೇಳಿಕೆ ನೀಡಿದೆ.

ಅಂತರಾಷ್ಟ್ರೀಯ

ವಿಜ್ಞಾನಿಗಳ ವಿರೋಧ

ಅಮೇರಿಕಾದ ತಾರಾ ಸಮರ ವ್ಯೂಹಕ್ಕೆ ವಿಜ್ಞಾನಿಗಳಿಂದ ಪ್ರಬಲವಾದ ವಿರೋಧ ಬರುತ್ತಿದೆ ಸುಮಾರು 500 ಮಂದಿ ಇಂಗ್ಲೆಂಡಿನ ವಿಜ್ಞಾನಿಗಳು "ತಾರಾ ಸಮರದಿಂದ ಬಾಹ್ಯಾಕಾಶದಲ್ಲಿ ಶಸ್ತ್ರ ಸ್ಪರ್ಧೆ ನಡೆಯುವುದು" ಎಂದು ಹೇಳಿಕೆ ನೀಡಿ ಇದನ್ನು ಖಂಡಿಸಿದ್ದಾರೆ ಇದರಲ್ಲಿ ಮೂರು ವಿಜ್ಞಾನಿಗಳು ನೋಬೆಲ್ ಪರಿತೋಷಕ ಪಡೆದವರು. ಅಮೇರಿಕಾದಲ್ಲಿ ಸುಮಾರು 3.00 ವಿಜ್ಞಾನಿಗಳು, ಇದೇ ರೀತಿಯ ಹೇಳಿಕೆ ನೀಡಿ ತಾರಾ ಸಮರದ ಪ್ರಯೋಗಗಳಲ್ಲಿ ಭಾಗಿಗಳಾಗಲಾರೆವೆಂದು ಪ್ರತಿಜ್ಞೆ ಮಾಡಿದರು. ಇವರಲ್ಲಿ 15 ವಿಜ್ಞಾನಿಗಳು ನೋಬೆಲ್ ಪಾರಿತೋಷಕ ಪಡೆದವರು.

ಜಪಾನಿನ ಶಾಂತಿ ಚಳುವಳಿ

ಜಗತ್ತಿನಲ್ಲಿ ಅಣ್ವಸ್ತ್ರಗಳ ಅಪಾಯದ ನೋವುಂಡ ಏಕೈಕ ದೇಶ ಜಪಾನ್. ಈ ದೇಶದ ಜನತೆ ಅಣ್ವಸ್ತ್ರಗಳ, ಯುದ್ಧದ ಭಾರಿವಿರೋಧಿಯಾಗಿದ್ದರೂ ಅಲ್ಲಿಯ ಆಳುವವರ್ಗಗಳು ಅಮೇರಿಕಕ್ಕೆ ತಮ್ಮ ಪುಟ್ಟ ದೇಶದಲ್ಲಿ 41 ಮಿಲಿಟರಿ ನೆಲೆಗಳನ್ನು ಸ್ಥಾಪಿಸಲು ಅವಕಾಶ ನೀಡಿದ್ದಾರೆ.

"ಅಣು ಸಮರ ಇಡೀ ಮಾನುಕುಲವನ್ನೇ ನಾಶ ಮಾಡುತ್ತದೆ ಆದ್ದರಿಂದ ಇದು ಮಾನುಕುಲದ ವಿರುದ್ಧ ಅಪರಾಧ" ಅಣು ಅಸ್ತ್ರಗಳನ್ನು ಸಂಪೂರ್ಣ ತಡೆಯುವಂತೆ ಬೇಡಿಕೆ ಇಟ್ಟ ಈ ತೋರಿಕೆಗೆ ಜಪಾನಿನಲ್ಲಿ 20 ಮಿಲಿಯನ್ ಜನರು ಅಂದರೆ ಜಪಾನಿನ 1/6 ಭಾಗ ಜನರು ಸಹಿ ಮಾಡಿರುತ್ತಾರೆ, (ಜಪಾನಿನ ಜನಸಂಖ್ಯೆಯೇ 120 ಮಿಲಿಯ) ಅಣು ಅಸ್ತ್ರ 40 ವರ್ಷಗಳ ಹಿಂದೆ ಹಿರೋಷಿಮಾ ಮತ್ತು ನಾಗಸಾಕಿಗಳನ್ನು ಸಂಪೂರ್ಣ ಧ್ವಂಸ ಮಾಡಿದೆ. ಇಂದು ಈ ಅಸ್ತ್ರಗಳಿಗಿಂತ ಒಂದು ಮಿಲಿಯನ್ ಪಾಲು ಪ್ರಬಲವಾದ ಅಸ್ತ್ರಗಳಿವೆ..

ಅಪಘಾತಕ್ಕೀಡಾಗಿ ಮೊಜಾಂಬಿಕ್ ಅಧ್ಯಕ್ಷ ಕಾಂ. ಸಮೋರ ಮಾಚೆಲ್ಲರ ಸಾವಿಗೆ ಕಾರಣವಾದ ವಿಮಾನವು ಗುಂಡೇಟಿಗೆ ತುತ್ತಾಗಿತ್ತು ಎಂದು ಅಪಘಾತದಲ್ಲಿ ಜೀವ ಉಳಿಸಿಕೊಂಡ ಪ್ರಯಾಣಿಕರು, ಚಾಲಕರೂ ಹೇಳಿದ್ದಾರೆ.

ನಮ್ಮ ಪಕ್ಷದ ಕಾರ್ಯಕ್ರಮ

(5ನೇ ಪುಟದಿಂದ)

ಇರುವ ವೈರುಧ್ಯಗಳೇನು, ಇದರಿಂದಾಗಿ ಅದು ಅನುಸರಿಸುವ ದ್ವಿಮುಖ ನೀತಿ [ಸಾಮ್ರಾಜ್ಯಶಾಹಿಗೆ ವಿರೋಧ ಒಂದೆಡೆ, ಅದರೊಂದಿಗೆ ರಾಜಿ ಹಾಗೂ ಸಹೋದ್ಯಮ ಇನ್ನೊಂದೆಡೆ] ಹೇಗೆ ಅದರ ವಿದೇಶಾಂಗ ನೀತಿಯಲ್ಲೂ ಪ್ರತಿಫಲನಗೊಳ್ಳುತ್ತದೆ, ಇದರಿಂದಾಗಿ ಅದು ಹೇಗೆ ಜಾಗತಿಕ ಶಾಂತಿ ಬಯಸುತ್ತದೆ, ಯುದ್ಧವನ್ನು ವಿರೋಧಿಸಿ, ಅಲಿಪ್ತ ನೀತಿ ಅನುಸರಿಸುತ್ತದೆ, ಇದಕ್ಕೆ ಮೊದಲು ಆರಂಭದ ವರ್ಷಗಳಲ್ಲಿ ಅದು ಏಕೆ ಪಾಶ್ಚಿಮಾತ್ಯ ಬಂಡವಾಳಶಾಹಿಗಳೊಂದಿಗೆ ಸಖ್ಯತೆ ಬೆಳೆಸಲು ಪ್ರಯತ್ನಿಸಿ ವಿಫಲಗೊಂಡಿತು, ಈಗಲೂ ಹೇಗೆ ಅಲಿಪ್ತ ನೀತಿ ಹಾಗೂ ಜಾಗತಿಕ ಶಾಂತಿಯ ಪರಿಕಲ್ಪನೆಗಳನ್ನು ಜನಸಾಮಾನ್ಯರ ಬಳಿಗೆ ಒಯ್ದು ಅದನ್ನು ಅವರ ಪ್ರಜ್ಞೆಯ ಭಾಗವಾಗಿಸಲು, ರಾಷ್ಟ್ರೀಯ ರಕ್ಷಣೆಯ ಅಗತ್ಯವಾಗಿ ತೋರಿಸಲು ಪ್ರಯತ್ನಿಸದೆ ಕೇವಲ ರಾಜತಾಂತ್ರಿಕ ಗಾಳವಾಗಿ ಬಳಸುತ್ತಿದೆ ಎಂದು ಈ ಪರಿಚ್ಛೇದಗಳಲ್ಲಿ ವಿಶ್ಲೇಷಿಸಲಾಗಿದೆ.

ಕ್ರಾಂತಿಯ ಪ್ರಸ್ತುತ ಘಟ್ಟದಲ್ಲಿ ಕಾರ್ಯ ಯೋಜನೆಯನ್ನು ಪರಿಶೀಲಿಸುತ್ತಾ ಕಾರ್ಯಕ್ರಮ ಬೂರ್ಜ್ವಾ ಆಳ್ವಿಕೆಯಲ್ಲಿ ಪ್ರಜಾಪ್ರಭುತ್ವದ ಸ್ಥಿತಿಯನ್ನು ವಿಶ್ಲೇಷಿಸಿ, ಹೇಗೆ ಜನಸಾಮಾನ್ಯರಿಗೆ ನಿಜವಾದ ಪ್ರಜಾಪ್ರಭುತ್ವವನ್ನು ನಿರಾಕರಿಸಲಾಗುತ್ತಿದೆ ಹಾಗೂ ಇದರಿಂದ ದೇಶದ ಸಮಗ್ರತೆಯನ್ನು ಕ್ರೋಢೀಕರಿಸುವ ಬದಲು ಹೇಗೆ ಪ್ರತ್ಯೇಕತಾವಾದಿ ಪ್ರವೃತ್ತಿಗಳಿಗೆ ಅವಕಾಶವಾಗುತ್ತದೆ ಎಂದು ವಿವರಿಸುತ್ತದೆ. ನಂತರ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಬಗ್ಗೆ ವಿವರಿಸುತ್ತಾ ಕಮ್ಯುನಿಸ್ಟ್ ಪಕ್ಷದ ತಕ್ಷಣದ ಗುಣಗಳೇನು, ಅವನ್ನು ಈಡೇರಿಸುವ ಜನತಾ ಪ್ರಜಾಪ್ರಭುತ್ವ ರಂಗದಲ್ಲಿ ಯಾವ ಜನವಿಭಾಗಗಳು ಇರುತ್ತವೆ, ಜನವಿಭಾಗಗಳ ಬೇಡಿಕೆಗಳೇನು ಎಂಬುದನ್ನು ಪಟ್ಟಿ ಮಾಡುತ್ತದೆ.

ಜನತಾ ಪ್ರಜಾಪ್ರಭುತ್ವ ಸ್ಥಾಪನೆಗೆ ಕರೆ

"ಭಾರತೀಯ ಕ್ರಾಂತಿಯ ಮೂಲಭೂತ ಕರ್ತವ್ಯಗಳ ಆಮೂಲಾಗ್ರ ಮತ್ತು ಸಂಪೂರ್ಣ ನಿರ್ವಹಣೆಗೆ ಇಂದಿನ ಘಟ್ಟದಲ್ಲಿ ಹಿರೇ ಬಂಡವಾಳಗಾರರ ಮತ್ತು ಜಮೀನ್ದಾರರ ಪ್ರಭುತ್ವವನ್ನು ಬದಲಿಸಿ ಕಾರ್ಮಿಕ ವರ್ಗದ ನೇತೃತ್ವದಲ್ಲಿರುವ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು ಅತ್ಯಾವಶ್ಯಕವಾಗಿದೆ" ಎಂದು ನಿಖರವಾಗಿ ಹೇಳುವ ಕಾರ್ಯಕ್ರಮ "ಈ ಎಲ್ಲಾ ಅಂಶಗಳನ್ನು ಆಧರಿಸಿ ಪಕ್ಷವು ರಾಷ್ಟ್ರದ ಎಲ್ಲಾ ದೇಶಪ್ರೇಮಿ ಶಕ್ತಿಗಳನ್ನು ಒಗ್ಗೂಡಿಸುವ ಕರ್ತವ್ಯವನ್ನು ತನ್ನ ಮುಂದಿರಿಸಿಕೊಂಡಿದೆ. ಅಂದರೆ, ಬಂಡವಾಳಶಾಹಿ – ಪೂರ್ವ ಸಮಾಜದ ಅವಶೇಷಗಳನ್ನು ನಿರ್ಮೂಲ ಮಾಡುವುದರಲ್ಲಿ ಆಸಕ್ತಿಯುಳ್ಳವರು, ಕೃಷಿ ಕ್ರಾಂತಿಯನ್ನು ಆಮೂಲಾಗ್ರವಾಗಿ ಮತ್ತು ರೈತರ ಹಿತಕ್ಕನುಗುಣವಾಗಿ ಪೂರ್ತಿಗೊಳಿಸುವುದರಲ್ಲಿ ಆಸಕ್ತಿಯುಳ್ಳವರು, ವಿದೇಶಿ ಬಂಡವಾಳದ ಎಲ್ಲಾ ಚಿಹ್ನೆಗಳನ್ನೂ ಅಳಿಸಿಹಾಕಿ ಭಾರತದ ಆರ್ಥಿಕತೆ, ಸಾಮಾಜಿಕ ಜೀವನ ಮತ್ತು ಸಂಸ್ಕೃತಿಯನ್ನು, ತೀವ್ರ ರೀತಿಯಲ್ಲಿ ಪುನರ್ರಚಿಸುವ ಹಾದಿಯಲ್ಲಿರುವ ಎಲ್ಲಾ ಅಡೆತಡೆಗಳನ್ನು ತೊಡೆದು ಹಾಕಲು ಆಸಕ್ತರಾಗಿರುವ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಲು ಪಕ್ಷವು ಶ್ರಮಿಸುತ್ತದೆ" ಎಂದು ಕರೆ ನೀಡುತ್ತದೆ.

ಕೊನೆಯದಾಗಿ, ನಮ್ಮ ದೇಶದ ಪ್ರಜಾಸತ್ತಾತ್ಮಕ ಮುನ್ನಡೆಗಾಗಿ ಹೋರಾಡುವ, ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ, ಸಾಮಾಜಿಕ ವಿಮುಕ್ತಿಯ ವಿಶ್ವವ್ಯಾಪೀ ಹೋರಾಟದಲ್ಲಿ ಭಾಗವಹಿಸುವ ಮಾರ್ಕ್ಸ್‌ವಾದ–ಲೆನಿನ್‌ವಾದ ಹಾಗೂ ಕಾರ್ಮಿಕವರ್ಗದ ಅಂತರಾಷ್ಟ್ರೀಯತೆಯ ನೀತಿಗಳ ಆಧಾರದ ಮೇಲೆ ಒಂದು ಬಲಿಷ್ಠ ಕಮ್ಯುನಿಸ್ಟ್ ಪಕ್ಷ ಕಟ್ಟಲು ಕಾರ್ಯಕ್ರಮ ಕರೆ ನೀಡುತ್ತದೆ.

ಪ್ರಧಾನಿ ರಾಜೀವ ಗಾಂಧಿಯವರಿಗೆ ಪತ್ರಿಕೆಗಳ ಛೀಮಾರಿ

ಕೇಂದ್ರ ಸರಕಾರ ಮತ್ತು ಪ್ರಧಾನ ಮಂತ್ರಿ ಮೊದಲಾದವರು ಗೂರ್ಖಾಲ್ಯಾಂಡ್ ಚಳುವಳಿಯ ನಿಜ ಸ್ವರೂಪದ ಕುರಿತು ಬೇಕೆಂದೇ ಕಣ್ಣು ಮುಚ್ಚಿ ಕುಳಿತಿದ್ದರೂ ದೇಶದ ಪತ್ರಿಕಾರಂಗ ಮತ್ತು ಹೆಚ್ಚಿನ ವಿರೋಧ ಪಕ್ಷಗಳು ಗೂರ್ಖಾಲ್ಯಾಂಡ್ ಚಳುವಳಿಯ ಅಪಾಯಕಾರಿ ಆಯಾಮವನ್ನು ಅರಿತುಕೊಂಡು ಸರಕಾರವನ್ನು ಎಚ್ಚರಿಸಿರುವುದು ಸ್ತುತ್ಯಾರ್ಹ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಆಗಲೀ ಪ. ಬಂಗಾಳದ ಎಡರಂಗ ಸರಕಾರದ ಕುರಿತಾಗಲಿ ಈವರೆಗೂ ಎಳ್ಳಷ್ಟೂ ದಾಕ್ಷಿಣ್ಯ ತೋರಿಸಿರದ ಪತ್ರಿಕೆಗಳೂ ಪ್ರಧಾನಿಯವರ ನಿಲುವನ್ನು ಖಂಡಿಸಿ ಎಡರಂಗ ಸರಕಾರದ ನಿಲುವನ್ನು ಮೆಚ್ಚಿಕೊಂಡಿವೆ.

ಇಂಡಿಯನ್ ಎಕ್ಸ್‌ಪ್ರೆಸ್

ಇಂಡಿಯನ್ ಎಕ್ಸ್‌ಪ್ರೆಸ್ ತನ್ನ 23-9-86ರ ಸಂಪಾದಕೀಯದಲ್ಲಿ ಹೀಗೆಂದಿದೆ: "ಗೂರ್ಖಾಲ್ಯಾಂಡ್ ಚಳುವಳಿ ಪ್ರತ್ಯೇಕತಾವಾದಿ ಮತ್ತು ರಾಷ್ಟ್ರವಿರೋಧಿಯಾದ ಚಳುವಳಿ ಅಲ್ಲವೆಂಬ ತೀರ್ಮಾನಕ್ಕೆ ರಾಜೀವಗಾಂಧಿ ಹೇಗೆ ಬಂದರೋ ಗೊತ್ತಾಗುತ್ತಿಲ್ಲ ಸುಭಾಷ್ ಗೈಶಿಂಗ್ ಭಾರತದ ಒಕ್ಕೂಟದೊಳಗೇ ಗೂರ್ಖಾಗಳಿಗೆ ಬೇರೆ ರಾಜ್ಯ ಬೇಕೆಂದೇನೋ ಹೇಳಿರಬಹುದು. ಆದರೆ ಆತ ಇದಕ್ಕೆ ಸಂಪೂರ್ಣ ವಿರುದ್ಧವಾದುದನ್ನೇ ಮಾಡುತ್ತಿದ್ದಾನೆ. ಆತನಿಗೆ ಪ್ರತ್ಯೇಕವಾದ ಸ್ವತಂತ್ರ ರಾಷ್ಟ್ರ ಬೇಕು. ಈ ನಿಟ್ಟಿನಲ್ಲಿ ಹಾಜರುಪಡಿಸಲಾಗಿರುವ ಎಲ್ಲ ರುಜುವಾತನ್ನು ರಾಜೀವಗಾಂಧಿ ಗಣನೆಗೇ ತೆಗೆದುಕೊಳ್ಳದಿರುವುದು ಆಶ್ಚರ್ಯಕರ. ಗೂರ್ಖಾಲ್ಯಾಂಡ್ ಚಳುವಳಿ ಪ್ರತ್ಯೇಕತಾವಾದಿ, ಜನವಿರೋಧಿ, ರಾಷ್ಟ್ರವಿರೋಧಿ ಮತ್ತು ರಾಜ್ಯವಿರೋಧಿಯಾದ ಚಳುವಳಿಯೆಂದು ಪ. ಬಂಗಾಳದ ಸರ್ವ ಪಕ್ಷಗಳ ಸಭೆ ಆಗಸ್ಟ್ 18 ರಂದು ಅಂಗೀಕರಿಸಿದ ನಿರ್ಣಯದಲ್ಲಿ ಘೋಷಿಸಲಾಗಿದೆ. ಈ ನಿರ್ಣಯಕ್ಕೆ ಪ. ಬಂಗಳಾದ ಕಾಂಗ್ರೆಸ್ (ಐ) ಅಧ್ಯಕ್ಷ ಪ್ರಿಯ ರಂಜನ ದಾಸ್‌ಮುನ್ಷಿ ಅವರೂ ಸಹಿ ಮಾಡಿದ್ದಾರೆ. ಕನಿಷ್ಟ ಪಕ್ಷ ರಾಜೀವಗಾಂಧಿ ಪ. ಬಂಗಾಳದ ತನ್ನ ಪಕ್ಷದ ಘಟಕವನ್ನಾದರೂ ಇಂತಹ ಪೇಚಿಗೆ ಸಿಕ್ಕಿಸಬಾರದಿತ್ತು."

"ನೇಪಾಳಿ ಭಾಷೆಯನ್ನು ಸಂವಿಧಾನದ ಎಂಟನೇ ಶೆಡ್ಯೂಲಿನಲ್ಲಿ ಸೇರಿಸಬೇಕೆಂಬ ಎಡರಂಗ ಸರಕಾರದ ಬೇಡಿಕೆಯನ್ನು ತಳ್ಳಿಹಾಕಿರುವುದು ಕೇಂದ್ರ ಸರಕಾರ. ಹೀಗಿರುವಾಗ ಎಡರಂಗ ಸರಕಾರದ ಸಂಕುಚಿತ ಪ್ರಾದೇಶಿಕ ಧೋರಣೆಯೇ ಗೂರ್ಖಾಲ್ಯಾಂಡ್ ಸಮಸ್ಯೆಗೆ ಮೂಲಕಾರಣವೆಂದು ರಾಜೀವ್ ಹೇಗೆ ಹೇಳಿದರೋ ಗೊತ್ತಾಗುತ್ತಿಲ್ಲ. ಗೂರ್ಖಾಲ್ಯಾಂಡ್ ಚಳುವಳಿಗೆ ಪ. ಬಂಗಾಳ ಸರಕಾರವೇ ಕಾರಣವೆಂದು ದೂಷಿಸಿದ ರಾಜೀವ್ ಗಾಂಧಿ ಜಿ. ಎನ್. ಎಲ್. ಎಫ್ ನಡೆಸುತ್ತಿರುವ ಹಿಂಸಾಚಾರವನ್ನು ಖಂಡಿಸದಿರುವುದು ಶೋಚನೀಯ. ಈ ಚಳುವಳಿಯಿಂದ ಮಡಿದವರು ಮತ್ತು ಹಾನಿಗೀಡಾದವರ ಬಗ್ಗೆ ಸೌಜನ್ಯಕ್ಕಾದರೂ ಪ್ರಧಾನಿ ಅನುಕಂಪ ವ್ಯಕ್ತಪಡಿಸಲಿಲ್ಲ".

ಡೆಕ್ಕನ್ ಹೆರಾಲ್ಡ್

ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಕಲ್ಕತ್ತಾ ವಿಶೇಷ ವರದಿಗಾರರು ತಾ 22-10-1986ರಂದು ಕಳುಹಿಸಿದ ವರದಿ :- "ಕಳೆದವಾರ ಡಾರ್ಜಿಲಿಂಗ್‌ನ ಸಿ. ಪಿ. ಐ. (ಎಂ) ಕಚೇರಿಯಲ್ಲಾದ ಬಾಂಬ್ ಸ್ಫೋಟವನ್ನು ಕಟುವಾದ ಶಬ್ದಗಳಲ್ಲಿ ಕೇಂದ್ರ ಸರಕಾರವು ಖಂಡಿಸಿರುವುದು ಜಿ. ಎನ್. ಎಲ್. ಎಫ್.ಗೆ ಅರ್ಥವಾಗಬೇಕು. ಆದರೆ ಕೇಂದ್ರ ಸರಕಾರದ ಗೃಹಖಾತೆಯಿಂದ ಇಂತಹ ಖಂಡನೆ ಈವರೆಗೂ ಬಂದಿಲ್ಲ. ಕೇಂದ್ರ ಕಾನೂನು ಸಚಿವ ಅಶೋಕಸೇನ್ ಅಂತೂ ಗೂರ್ಖಾಲ್ಯಾಂಡ್ ಚಳುವಳಿ ರಾಷ್ಟ್ರವಿರೋಧಿಯನ್ನುವುದನ್ನು ಸುತರಾಂ ಒಪ್ಪುತ್ತಿಲ್ಲ. ಜಿ ಎನ್ ಎಲ್ ಎಫ್. ಮುಂದಾಳು ಸುಭಾಶ್ ಗೈಶಿಂಗ್ ವಿದೇಶ ಸರಕಾರಗಳಿಗೆ ಮನವಿ ಮಾಡಿಕೊಂಡಿರುವುದು, ಭಾರತೀಯ ಸೇನೆಯಲ್ಲಿರುವ ಗೂರ್ಖಾ ಸಿಪಾಯಿಗಳು ದಂಗೆಯೇಳಬೇಕೆಂದು ಕರೆಯಿತ್ತಿರುವುದು ಮತ್ತು ಭಾರತದಲ್ಲಿ ಅಂತರ್ಯುದ್ಧವೊಂದು ನಡೆಯಲಿದೆಯೆಂದು ಆತ ಬೆದರಿಸುತ್ತಿರುವುದು ಇತ್ಯಾದಿಗಳನ್ನು ಯಾರೂ ಅವಗಣಿಸುವುದು ಸಾಧ್ಯವಿಲ್ಲ."

"ಪ್ರಧಾನಿ ರಾಜೀವ್ ಗಾಂಧಿ ಪ. ಬಂಗಾಳಕ್ಕೆ ಮೂರುದಿನಗಳ ಕಾಲ ಸಂದರ್ಶನ ನೀಡಿ ಸೆಪ್ಟಂಬರ 19 ರಂದು ದುರ್ಗಾಪುರದಲ್ಲಿ ಗೂರ್ಖಾಲ್ಯಾಂಡ್ ಚಳುವಳಿಯ ಕುರಿತು ರಾಜ್ಯ ಸರಕಾರವನ್ನು ದೂಷಿಸಿದ ಮೇಲೆ ಡಾರ್ಜಿಲಿಂಗ್‌ನಲ್ಲಿ ಪರಿಸ್ಥಿತಿ ತೀರಾ ಕೆಟ್ಟುಹೋಯಿತು. ಜಿ. ಎನ್. ಎಲ್ ಎಫ್. ಚಳುವಳಿ ರಾಷ್ಟ್ರವಿರೋಧಿ ಅಲ್ಲವೆಂಬ ಅವರ ಮಾತು ಡಾರ್ಜಿಲಿಂಗ್ ತಲುಪಿದ ಕ್ಷಣವೇ ಚಳುವಳಿಗಾರರು ಉತ್ಸವಾಚರಣೆ ಮಾಡಿದರು.......... ಜಿ. ಎನ್. ಎಲ್ ಎಫ್ ಚಳುವಳಿಗಾರರು ಸ್ಥಳೀಯ ಪೋಲೀಸ್ ಸುಪರಿಂಟೆಂಡೆಂಟರ ಮೇಲೆ ನಡೆಸಿದ ಧಾಳಿ, ಜಿ. ಎನ್. ಎಲ್. ಎಫ್. ನ ಮಹಿಳಾ ವಿಭಾಗದ ಸದಸ್ಯರಿಂದ ಹಿಂಸಾತ್ಮಕ ಮತ ಪ್ರದರ್ಶನ ಇತ್ಯಾದಿಗಳಿಂದ ರುಜುವಾತಾಗುವುದೇನೆಂದರೆ ಗೈಶಿಂಗ್ ಮತ್ತವನ ಅನುಚರರು ಸ್ನಾಯುಬಲದ ಮೇಲೆ ನಂಬುಗೆ ಇರಿಸಿದ್ದಾರೆ......ಮಾತು ಕತೆಗಳಲ್ಲಿ ಅಲ್ಲ"

(ಅಶಿನ್ ಮುಖ್ಯೋಪಾಧ್ಯಾಯ, ಎಕ್ಸ್‌ಪ್ರೆಸ್ ನ್ಯೂಸ್ ಸರ್ವಿಸ್ 18-10-1986)

ಸಂಡೇ ಪತ್ರಿಕೆಯಲ್ಲಿ ಓದುಗರ ಪತ್ರಗಳು

ಬಿಸಿರಕ್ತದ ಸುಭಾಸ್ ಗೈಶಿಂಗ್ ಗುಡ್ಡಗಾಡು ಪ್ರದೇಶದ ಜನರನ್ನು ಹಾದಿ ತಪ್ಪಿಸುತ್ತಿದ್ದಾನೆ. ಗೂರ್ಖಾಲ್ಯಾಂಡ್ ರಚನೆಯಾದರೆ ಅದು ಅವನ ಸ್ವಾರ್ಥಕ್ಕಾಗಿ ಗೈಶಿಂಗ್ ಒಬ್ಬಂಟಿಯಾಗಿ ಈ ಕೆಲಸ ಮಾಡುತ್ತಿಲ್ಲವೆನ್ನುವುದು ಸ್ಪಷ್ಟ....ಬಿನಯ್ ಕುಮಾರ್ ದತ್ತ)

"ಭಾರತ-ನೇಪಾಳ ಒಪ್ಪಂದವನ್ನು ರದ್ದುಪಡಿಸುವಂತೆ ನೇಪಾಳವು ಜಿ. ಎನ್. ಎಲ್. ಎಫ್. ಮೇಲೆ ಒತ್ತಡ ಹಾಕಿರುವಂತಿದೆ. ಜಿ. ಎನ್. ಎಲ್. ಎಫ್. ನೇಪಾಳ ಮತ್ತು ಸಿ. ಐ. ಎ.ನ ಕೈಗೊಂಬೆ ಅಷ್ಟೆ.

(ಚಮನ್‌ಲಾಲ್ ಅಗರ್‌ವಾಲ್)

"ಗುಡ್ಡಗಾಡು ನಿವಾಸಿಗಳಾದ ನಾವು ಗೈಶಿಂಗ್ ನಮ್ಮ ಬಗ್ಗೆ ತೋರಿಸುತ್ತಿರುವ ವರ್ತನೆಯಿಂದ ರೋಸಿದ್ದೇವೆ. ಡಾರ್ಜಿಲಿಂಗ್‌ನ ಜನರಲ್ಲಿ ಶೇ 45 ರಷ್ಟು ಗುಡ್ಡಗಾಡು ಜನರಿದ್ದಾರೆ. ಗೈಶಿಂಗ್‌ನ 'ಗೂರ್ಖಾಲ್ಯಾಂಡ್'ನಲ್ಲಿ ಇಲ್ಲಿನ ಮೂಲನಿವಾಸಿಗಳಾದ ನಮ್ಮ ಪಾಡೇನು ? (ಪಿ. ಟಿ. ಲೆಪ್ಚಾ.)

"ಈ ಗೂರ್ಖಾಲ್ಯಾಂಡ್ ಚಳುವಳಿ ನಡೆಯುತ್ತಿರುವುದಕ್ಕಾಗಿ ಪ. ಬಂಗಾಳ ಸರಕಾರವನ್ನು ದೂಷಿಸಿದ ರಾಜೀವ್ ಈ ಚಳುವಳಿ ರಾಷ್ಟ್ರವಿರೋಧಿಯಲ್ಲ ಎನ್ನುವ ಮುದ್ರೆಯನ್ನು ಸಹ ಒತ್ತಿಬಿಟ್ಟರು. ಈ ನಡುವೆ ಗೂರ್ಖಾ ನಾಯಕ ಸುಭಾಷ್ ಘೀಸಿಂಗ್ ಖುಷಿಯಿಂದ ಕುಣಿದಾಡಿದ. ಇದೇ ರೀತಿಯ ನಿರ್ಧಾರವೇ ಭಿಂದ್ರನ್‌ವಾಲೆಯ ಜನನಕ್ಕೆ ಕಾರಣವಾದದ್ದು ಹಾಗೂ ಇಂದು ಪಂಜಾಬ್‌ನಲ್ಲಿ ನಡೆಯುತ್ತಿರುವ ಘಟನೆಗಳಿಗೆಲ್ಲಾ ಮೂಲ...... ಪ. ಬಂಗಾಳ ಸರಕಾರಕ್ಕೆ ಕಸಿವಿಸಿಯುಂಟು ಮಾಡುವ ಸಲುವಾಗಿ ಕೇಂದ್ರ ಸರಕಾರ ಗೂರ್ಖಾಲ್ಯಾಂಡ್ ಬೆಂಕಿಯ ಜೊತೆ ಚೆಲ್ಲಾಟವಾಡುತ್ತಿರುವುದು ಎಂತಹ ವಿಪರ್ಯಾಸ.

(ಲಂಕೇಶ್ ಪತ್ರಿಕೆ 19-10-1986)

ಕಾಂಗ್ರೆಸ್ಸಿಗರ ಗೋಸುಂಬೆತನ

ಗೂರ್ಖಾಲ್ಯಾಂಡ್ ಚಳುವಳಿಯ ಕುರಿತು ಕಾಂಗ್ರೆಸ್ (ಐ) ನ ಪ್ರಭೃತಿಗಳು ಅನುಸರಿಸುತ್ತಿರುವ ಊಸರವಳ್ಳಿ ಪ್ರವೃತ್ತಿಗೆ ಇಲ್ಲಿದೆ ಎರಡು ದೃಷ್ಟಾಂತ.

"ಗೈಶಿಂಗ್ ತನ್ನ ಚಳುವಳಿಗಾಗಿ ವಿದೇಶಗಳಿಂದ ನೆರವು ಪಡೆಯುವುದರಲ್ಲಿ ಯಾವ ತಪ್ಪೂ ಇಲ್ಲ. ಯಾಕೆಂದರೆ ಈ ಹಿಂದೆ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರರೂ ಹೀಗೇ ಮಾಡಿದ್ದರು"— ಇದನ್ನು ಹೇಳಿದವರು ಸ್ವತಃ ಕೇಂದ್ರ ಕಾನೂನು ಮಂತ್ರಿ ಅಶೋಕ ಸೇನ್. ಈ ಮಹಾತ್ಮರ ಪಾಲಿಗೆ ದೇಶದ ಸ್ವಾತಂತ್ರ್ಯ ಹೋರಾಟ ಮತ್ತು ಗೈಶಿಂಗ್‌ನ ದೇಶದ್ರೋಹಿ ಚಳುವಳಿಗಳಲ್ಲಿ ವ್ಯತ್ಯಾಸವೇ ಕಾಣಿಸುತ್ತಿಲ್ಲ ! ಗೂರ್ಖಾಲ್ಯಾಂಡ್ ಚಳುವಳಿ ರಾಷ್ಟ್ರವಿರೋಧಿ ಅಲ್ಲವೆಂಬ ರಾಜೀವಗಾಂಧಿಯ ಹೇಳಿಕೆಗೆ ಪ್ರತಿಕ್ರಿಯೆ ಕೇಳಿದಾಗ, ಪ. ಬಂಗಾಳ ಕಾಂಗ್ರೆಸ್ (ಐ) ನ ಪ್ರಧಾನಕಾರ್ಯದರ್ಶಿಗಳಲ್ಲೊಬ್ಬರಾದ ಸುಬ್ರತೋ ಮುಖರ್ಜಿ ಉದುರಿಸಿದ ಅಣಿಮುತ್ತುಗಳು ಇವು: "ಸದನದಲ್ಲಿ ನಾನು ಅವರ (ರಾಜೀವ್ ಗಾಂಧಿಯ) ಹೇಳಿಕೆಯನ್ನೇ ಬೆಂಬಲಿಸಬೇಕಾಗುತ್ತದೆ. ಆದರೆ ವೈಯುಕ್ತಿಕವಾಗಿ ನಾನು ಸುಭಾಷ್ ಗೈಶಿಂಗ್ ಹಾಗೂ ಆತನ ಜಿ. ಎನ್. ಎಲ್. ಎಫ್.ನ್ನು ದೇಶದ್ರೋಹಿಗಳೆಂದೇ ಕರೆಯುತ್ತೇನೆ. ನಮ್ಮ ಹೆಚ್ಚಿನ ಕಾರ್ಯಕರ್ತರೂ ಹೀಗೇ ಭಾವಿಸುತ್ತಾರೆ. ಜನ ನಮ್ಮನ್ನು ಮೋಸಗಾರರೆಂದು ಕರೆದರೆ ಅದಕ್ಕೆ ಜವಾಬ್ದಾರಿ ಖಂಡಿತವಾಗಿಯೂ ನಮ್ಮದಲ್ಲ" (ಇಂಡಿಯನ್ ಎಕ್ಸ್‌ಪ್ರೆಸ್ 12-10-1986)

ವೈದ್ಯಾಧಿಕಾರಿಗಳ ಮೇಲೆ ಹಲ್ಲೆ ಪ್ರತಿಭಟಿಸಿ ಸಿರುಗುಪ್ಪ ಬಂದ್

ಬಳ್ಳಾರಿ ಜಿಲ್ಲೆಯ ಸಿರುಗುಪ್ಪದ ವೈದ್ಯರುಗಳಾದ ಡಾ॥ಕೃಷ್ಣಮೂರ್ತಿಯವರ ಮೇಲೆ ದಿನಾಂಕ 19.10.86 ರಂದು ಸ್ಥಳೀಯ ಜನತಾ ಪಾರ್ಟಿಯ ಕಾರ್ಯದರ್ಶಿ ಹಾಗೂ ಇತರ ಕಾರ್ಯಕರ್ತರುಗಳು ಗೂಂಡಾಗಿರಿ, ಹಲ್ಲೆಯನ್ನು ನಡೆಸಿದ್ದಾರೆ.

ವೈದ್ಯಾಧಿಕಾರಿ ಪ್ರಾಮಾಣಿಕ ಹಾಗೂ ಜನತೆಗೆ ವೈದ್ಯಕೀಯ ಶುಶ್ರೂಷೆ ನೀಡುವಲ್ಲಿ ತುಂಬಾ ಕಾಳಜಿಯುಳ್ಳ ನಿಷ್ಪಕ್ಷಪಾತ ವ್ಯಕ್ತಿಯೆಂದು ಗುರುತಿಸಲ್ಪಟ್ಟಿದ್ದಾರೆ.

ದಿನಾಂಕ 19 ರಂದು ನಡೆದ ಗೂಂಡಾ ಹಲ್ಲೆಗೆ ಜನತಾ ಪಕ್ಷದವರು ಈ ವೈದ್ಯರ ವರ್ಗಾವಣೆ ಮಾಡಲು ಪ್ರಯತ್ನಿಸಿ ವಿಫಲರಾಗಿದ್ದೇ ಕಾರಣವೆಂದು ಗೊತ್ತಾಗಿದೆ. ಕರ್ತವ್ಯದ ಮೇಲಿದ್ದ ಮೇಲಧಿಕಾರಿಗಳ ಮೇಲೆ ವಿನಾಕಾರಣ ಏರಿ ಹೋಗಿ, ಅವ್ಯಾಚ್ಯ ಮಾತನಾಡಿ ಹೊಡೆದರೆಂದೂ, ಜನತಾ ಪಕ್ಷದ ಸಿರುಗುಪ್ಪ ಕಾರ್ಯದರ್ಶಿ ಪೂಜಾರ್ ಮಲ್ಲೇಶಪ್ಪ ಹಾಗೂ ಕಾರ್ಯಕರ್ತರಾದ ಮಲ್ಲನಗೌಡ, ಶ್ರೀರಾಮಪ್ಪನವರುಗಳ ಮೇಲೆ ಮೊಕದ್ದಮೆ ಹೂಡಲಾಗಿದೆ.

ಈ ಘಟನೆ ಸರ್ಕಲ್ ಇನ್‌ಸ್ಪೆಕ್ಟರ್ ಅವರ ಸಮ್ಮುಖದಲ್ಲೇ ನಡೆಯುತ್ತಿದ್ದರೂ ಮೂಕ ಪ್ರೇಕ್ಷಕರಂತೆ ನಿಂತು ನೋಡುತ್ತಿದ್ದರು. ಶಾಸಕ ರೇವಣಸಿದ್ದಯ್ಯನವರ ಬೆಂಬಲ ಈ ಹಲ್ಲೆಕೋರರಿಗೆ ಇದೆಯೆಂದು ಸ್ಪಷ್ಟವಾಗಿದೆ. ಹಿಂದೆ ವರ್ಗಾವಣೆಗೆ ಇವರೇ ಪ್ರಯತ್ನಿಸಿದ್ದರು.

ಇಂತಹ ದೌರ್ಜನ್ಯವನ್ನು ವಿರೋಧಿಸಿ ಡಿ. ವೈ. ಎಫ್. ಐ. ಮತ್ತು ಕರ್ನಾಟಕ ಪ್ರಾಂತರೈತ ಸಂಘ ಜಂಟಿಯಾಗಿ 21 ರಂದು 'ಸಿರುಗುಪ್ಪ ಬಂದ್'ಗೆ ನೀಡಿದ್ದ ಕರೆಯಂತೆ ಬಂದ್ ಸಂಪೂರ್ಣ ಯಶಸ್ವಿಯಾಯಿತು.

ನಗರದ 144ಲ್ಲಿ ಕಲಮು ಜಾರಿ ಮಾಡಲಾಗಿದ್ದರೂ, ಸುಮಾರು 500ಕ್ಕೂ ಹೆಚ್ಚು ಜನತೆಯ ಮೆರವಣಿಗೆ ನಡೆಯಿತು. ವೈದ್ಯಾಧಿಕಾರಿಗಳಿಗೆ ಬೆಂಬಲ ನೀಡಿ ಸಾವಿರಾರು ಜನರು ಅವರ ಮನೆಯ ಮುಂದೆ ಕಿಕ್ಕಿರಿದಿದ್ದರು.

ಮೆರವಣಿಗೆ ನೇತೃತ್ವವನ್ನು ಪ್ರಾಂತ ರೈತ ಸಂಘದ ಜಿಲ್ಲಾ ಸಹ ಕಾರ್ಯದರ್ಶಿ ಕಾಂ. ಯು. ಬಸವರಾಜ್. ಡಿ. ವೈ. ಎಫ್. ಐ. ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಲಕ್ಷ್ಮಣ್ ಕುಮಾರ್, ಹಾಗೂ ಎಲ್ಲಪ್ಪ, ಎಲ್ಲನಗೌಡ, ಬಸವರಾಜ್, ರುದ್ರಗೌಡ ಮೂರೆಪ್ಪನವರು ವಹಿಸಿದ್ದರು.

REG No. BGW-148 MAG (2) PRB DECR 319/78-79 November 2, 1986

ಕಾಮ್ರೇಡ್ ಹಸನ್‌ಖಾನ್ ಇನ್ನಿಲ್ಲ

(1ನೇ ಪುಟದಿಂದ)

ಪಕ್ಷದ ನಿಷ್ಠಾವಂತ ಶಿಸ್ತುಬದ್ಧ ಸೈನಿಕನಾಗಿ ದುಡಿದರು.

1946-47 ರಲ್ಲಿ ರಜಾಕಾರ ದಬ್ಬಾಳಿಕೆಯ ವಿರುದ್ಧ ಹೋರಾಡಲು ಗುಲ್ಬರ್ಗಾ ಜಿಲ್ಲೆಯಿಂದ ಬಂದ ತಿಳಗುಳ, ಕಾಳಂಬರಿ, ದಾಮು ಮೊದಲಾದವರಿಗೆ ಸಹಾಯ ನೀಡಲು ಬಿಜಾಪುರ-ಶೋಲಾಪುರ ಗಡಿಪ್ರದೇಶಗಳಲ್ಲಿ ನಾವು ಶಿಬಿರಗಳನ್ನು ನಡೆಸುತ್ತಿದ್ದಾಗ ಸ್ಯಾಕ್ಲೋಸ್ಟಾಯಿಲ್ ಮಾಡಿದ ಸಾಹಿತ್ಯ ಪೂರೈಸಿದರು ಹಸನ್ ಖಾನ್ ಮತ್ತು ಇತರ ಸಂಗಾತಿಗಳು.

1963-64ರಲ್ಲಿ ಪರಿಷ್ಕರಣವಾದದ ವಿರುದ್ಧ ಹೋರಾಡಿ ಬಹುಸಂಖ್ಯೆ ಸದಸ್ಯರನ್ನು ಸಿ.ಪಿ.ಐ. (ಎಂ)ನಲ್ಲಿ ಉಳಿಸಿಕೊಂಡವರು, ಅನಂತರ ಹಲವಾರು ಸಲ ಪಕ್ಷದ ಶಿಸ್ತುಬದ್ಧ ಕಾರ್ಯಕರ್ತನಾಗಿ ಉಳಿದು, ಪಕ್ಷವನ್ನು ಬೆಳೆಸಿದವರು ಹಸನ್‌ಖಾನ್ ಅವರು.

1972 ರಲ್ಲಿ ರಾಜ್ಯ ಸಮಿತಿಯ ಆಮಂತ್ರಿತ ಸದಸ್ಯರಾಗಿದ್ದು; ಅನಂತರ ಕೊನೆಯವರೆಗೂ ಚುನಾಯಿತ ಸದಸ್ಯರಾಗಿದ್ದರು. ಗಂಗಾಧರ ನಮೋಶಿಯವರ ಜೊತೆಯಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ರೈತ ಕಾರ್ಮಿಕರ ಸಂಘಟನೆ ಕಟ್ಟುವುದರಲ್ಲಿ ಅವರ ಪಾತ್ರ ದೊಡ್ಡದಾಗಿತ್ತು. ನಮೋಶಿಯವರ ಅಗಲುವಿಕೆಯಿಂದ ತೆರವಾದ ಜಿಲ್ಲಾ ಕಾರ್ಯದರ್ಶಿ ಜವಾಬ್ದಾರಿಯನ್ನು ಹೊತ್ತು, ಗುಲ್ಬರ್ಗಾ, ಶಹಾಬಾದಗಳಲ್ಲಿ ಕಾರ್ಮಿಕ ಸಂಘಟನೆಗಳನ್ನು ಕಟ್ಟಿ, ಕಲ್ಲಪ್ಪ ಕಿರಣಗಿ ಮೊದಲಾದವರ ಜೊತೆಯಲ್ಲಿ ರೈತ ಸಂಘಟನೆಯನ್ನು ವಿಸ್ತಾರಗೊಳಿಸಿದ್ದಾರೆ. ಮಾರ್ಕ್ಸ್‌ವಾದವನ್ನು ಆಳವಾಗಿ ಅಭ್ಯಸಿಸಿದ ಖಾನ್ ಅವರು ಉತ್ತಮ ಉಪನ್ಯಾಸಕರೂ, ಭಾಷಣಕಾರರೂ ಆಗಿದ್ದರು. ಪಕ್ಷದೊಳಗಷ್ಟೇ ಅಲ್ಲ, ಇತರ ಪಕ್ಷದಲ್ಲಿ ಹಾಗೂ ಜನಸಾಮಾನ್ಯರಲ್ಲಿ ನೆಚ್ಚಿನ ಮುಖಂಡರಾಗಿ ಬೆಳೆದು ಬಂದಿದ್ದರು.

ಸಾಹಿತ್ಯ ಹೋರಾಟದಲ್ಲಿ ಖಾನ್ ಅವರದ್ದು ಮೇಲುಗೈ. ಟ್ಯಾಪ್ ಮಾಡುವ ತಮ್ಮ ಅಂಗಡಿಯನ್ನು ಕಮ್ಯುನಿಸ್ಟ್ ಸಾಹಿತ್ಯ ಮಾರಾಟದ ಆಗರವನ್ನಾಗಿ ಪರಿವರ್ತಿಸಿದ್ದರು. 1964-65 ರಲ್ಲಿ ಅವರು ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾದ ನಂತರ ಹೆಗಲಲ್ಲಿ ಜೋತಾಡುವ ಕೈಚೀಲದಲ್ಲಿ ಕಮ್ಯುನಿಸ್ಟ್ ಸಾಹಿತ್ಯ ತುಂಬಿರುತ್ತಿತ್ತು. ನಿರ್ಭೀತಿಯಿಂದ ಸಾಹಿತ್ಯ ಮಾರಾಟ ಮಾಡುವುದರಲ್ಲಿ ಅಗ್ರಗಣ್ಯರಾಗಿದ್ದರು. ಬೆಂಗಳೂರಿಗೆ ಬಂದಾಗಲೆಲ್ಲ ಕ್ರಿಯಾ ಪುಸ್ತಕಾಲಯದಿಂದ ತನಗಿಂತಲೂ ಹೆಚ್ಚು ಭಾರವಾದ ಪುಸ್ತಕಗಳ ಗಂಟನ್ನೊಯ್ಯುವುದು ಅವರ ಪರಿಪಾಠವಾಗಿತ್ತು.

ಅವರ ಅಗಲುವಿಕೆ ಮುಖ್ಯವಾಗಿ ಗುಲ್ಬರ್ಗಾ ಜಿಲ್ಲೆಯ ಪಕ್ಷಕ್ಕೆ, ರೈತ-ಕಾರ್ಮಿಕರ ಚಳುವಳಿಗೆ ಅಪಾರ ನಷ್ಟವಾಗಿದೆ. ರಾಜ್ಯ ಸಮಿತಿ ಸದಸ್ಯತ್ವದಿಂದಲೂ, ಜಿಲ್ಲಾ ಕಾರ್ಯದರ್ಶಿ ಸ್ಥಾನದಿಂದಲೂ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಕಳೆದೆರಡು ತಿಂಗಳಿಂದಲೂ ಹೇಳುತ್ತ ಬಂದಿದ್ದರು. ಅವರಲ್ಲಿಯ ಸೌಜನ್ಯತೆ, ಎಂಥ ಕಷ್ಟಕಾಲದಲ್ಲೂ ಪಕ್ಷದ ಮೇಲಿದ್ದ ಅವರ ನಿಷ್ಠೆ ಎಲ್ಲರಿಗೂ ಅನುಕರಣೀಯವಾಗಿದೆ. ಮಹಮ್ಮದ್ ಹಸನ್ ಖಾನ್ ಅವರ ಅಗಲುವಿಕೆಯಿಂದ ನನ್ನ ಹತ್ತಿರದ, ಬಹಳ ವರ್ಷಗಳ ಆತ್ಮೀಯತೆಯ ಒಬ್ಬ ಸಂಗಾತಿಯನ್ನು ಕಳೆದುಕೊಂಡಂತಾಗಿದೆ.

-ಎನ್. ಕೆ. ಉಪಾಧ್ಯಾಯ

ಕಾರ್ಮಿಕ ಸಂಘಗಳ ಜಿಲ್ಲಾ ಸಂಘಟನಾ ಸಮಿತಿ ರಚನೆ

ಬಳ್ಳಾರಿ ಜಿಲ್ಲೆಯಲ್ಲಿನ ಅಂಗಡಿ ಮತ್ತು ವ್ಯಾಪಾರ ಸಂಸ್ಥೆಗಳ ನೌಕರರ ಸಂಘ, ಕಲ್ಲು ಒಡೆಯುವವರ ಸಂಘ, ಬೀಡಿ ಕೆಲಸಗಾರರ ಸಂಘ, ಹಮಾಲರ ಸಂಘ, ಬ್ಯಾಂಕ್ ನೌಕರರ ಸಂಘಗಳ ಪ್ರತಿನಿಧಿಗಳನ್ನೊಳಗೊಂಡಂತೆ ದಿ: 23-10-86 ರಂದು ಬಳ್ಳಾರಿಯಲ್ಲಿ ಸಭೆ ಸೇರಿ ಜಿಲ್ಲಾ ಮಟ್ಟದ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ಜಿಲ್ಲೆಯಲ್ಲಿ ಕಾರ್ಮಿಕ ವರ್ಗದ ಚಳುವಳಿಯನ್ನು ವಿಸ್ತರಿಸಿ, ಬೆಳೆಸುವ ದಿಶೆಯಲ್ಲಿ ಚರ್ಚಿಸಲಾಯಿತು.

ಜಿಲ್ಲಾ ಸಂಘಟನಾ ಸಮಿತಿಗೆ ಕಾಂ. ನಾಗಭೂಷಣ್, ಕಾಂ. ಸಿ. ರಘುನಾಥ್, ಕಾಂ. ಮಲ್ಲಿಕಾರ್ಜುನ್, ಕಾಂ. ಸಿದ್ದಪ್ಪ, ಕಾಂ. ಬಡೇಸಾಬ್ ಸದಸ್ಯರಾಗಿದ್ದಾರೆ.

ಹರಪನಹಳ್ಳಿ : ಪ್ರಾಂತ ರೈತ ಸಂಘದಿಂದ ಗ್ರಾಮೀಣ ಅಧ್ಯಯನ ಕಾರ್ಯಕ್ರಮ

ಹರಪನಹಳ್ಳಿಯಾದ್ಯಂತ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಗ್ರಾಮೀಣ ಪ್ರದೇಶದ ಜನತೆಯ ಸ್ಥಿತಿಗತಿಗಳನ್ನು ಅರಿಯುವ ಸಲುವಾಗಿ 'ಅಧ್ಯಯನ ಜಾತಾ'ವನ್ನು ನಡೆಸಲಾಗುತ್ತದೆ.

15 ಜನರ ತಂಡವು ಸೈಕಲ್ ಮೇಲೆ ಜಾತಾ ನಡೆದಿದೆ.

ಈ ಜಾತಾ 20-10-86 ರಿಂದ ಆರಂಭಗೊಂಡು ತುಂಬಾ ಯಶಸ್ವಿಯಾಗಿ ಮುಂದುವರಿಯುತ್ತಿರುವುದರ ಬಗ್ಗೆ ವರದಿಯಾಗಿದೆ.

ಎಸ್. ಎಫ್. ಐ. ರಾಜ್ಯ ಸಮಿತಿ ತೀರ್ಮಾನಗಳು :

ಮಂಗಳೂರಿನಲ್ಲಿ ರಾಜ್ಯ ಸಮಾವೇಶ

ಅಕ್ಟೋಬರ್ 25 ರಂದು ಬೆಂಗಳೂರಿನಲ್ಲಿ ಆರ್. ಜಯಕುಮಾರ್ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಎಸ್. ಎಫ್. ಐ ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಯು ಮೊಜಾಂಬಿಕ್ ಅಧ್ಯಕ್ಷರಾದ ಸಮೋರಾ ಮಾಷೆಲ್ ರವರ ದುರ್ಮರಣಕ್ಕೆ ಹಾಗು ಸಿ. ಪಿ. ಐ(ಎಂ) ರಾಜ್ಯ ಸಮಿತಿ ಸದಸ್ಯರೂ, ಗುಲ್ಬರ್ಗ ಜಿಲ್ಲಾ ಪಕ್ಷದ ಕಾರ್ಯದರ್ಶಿಗಳೂ ಆದ ಕಾಂ. ಹಸನ್ ಖಾನ್ ರವರ ಅಕಾಲ ಮರಣಕ್ಕೆ ಶ್ರದ್ಧಾಂಜಲಿ ಸಲ್ಲಿಸಿತು.

ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಡಿಸೆಂಬರ್ 11 ರಿಂದ 15ರವರೆಗೆ ನಡೆಯಲಿರುವ 6 ನೇ ರಾಷ್ಟ್ರ ಸಮ್ಮೇಳನಕ್ಕೆ ಪೂರ್ವ ಭಾವಿಯಾಗಿ ಕರ್ನಾಟಕ ರಾಜ್ಯ ಸಮಾವೇಶವನ್ನು ಡಿಸೆಂಬರ್ ತಿಂಗಳ 5 ರಂದು ದ. ಕ. ಜಿಲ್ಲೆಯ ಮಂಗಳೂರಿನಲ್ಲಿ ನಡೆಸಲು ನಿರ್ಧರಿಸಲಾಯಿತು. 200 ಸದಸ್ಯರಿಗೆ ಒಬ್ಬರಂತೆ ಪ್ರತಿನಿಧಿಗಳನ್ನು ಸಮಾವೇಶಕ್ಕೆ ಆಯ್ಕೆ ಮಾಡಲು ಹಾಗು ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಸಮಾವೇಶ ಹಾಗು ಘಟಕ ಸಮ್ಮೇಳನ ನಡೆಸಲೂ ತೀರ್ಮಾನಿಸಲಾಗಿದೆ.

ರಾಷ್ಟ್ರ ಸಮ್ಮೇಳನದ ಸಂದರ್ಭದಲ್ಲಿ ಬಿಡುಗಡೆ ಮಾಡಲು ಪೂರಕವಾಗಿ ರಾಜ್ಯದ ಎಸ್. ಎಫ್. ಐ ಚರಿತ್ರೆ ಬಗ್ಗೆ ಸ್ಥಳೀಯವಾಗಿ ವಿಷಯ ಸಂಗ್ರಹಿಸಲು ನಿರ್ಧರಿಸಲಾಗಿದ್ದು—ರಾಜ್ಯದ ಎಲ್ಲಾ ಸಮಿತಿಗಳು ಈ ಬಗ್ಗೆ ಸ್ಥಳೀಯವಾಗಿ ವಿಷಯ ಸಂಗ್ರಹಿಸಲು ಹಾಗು ಪ್ರಮುಖವಾಗಿ ಈ ಹಿಂದೆ ಎಸ್. ಎಫ್. ಐ. ನಲ್ಲಿ ಕೆಲಸ ನಿರ್ವಹಿಸಿದ್ದ ಸಂಗಾತಿಗಳೊಂದಿಗೆ ಸಂದರ್ಶನ ನಡೆಸಿ ವಿಷಯ ಸಂಗ್ರಹಿಸಿ ಕೂಡಲೇ ರಾಜ್ಯ ಸಮಿತಿಗೆ ಕಳುಹಿಸಿಕೊಡಲು ವಿನಂತಿಸಲಾಗಿದೆ.

ರಾಜ್ಯದಲ್ಲಿ ಈಗಾಗಲೇ ಮಹಾಪೀಡೆಯಾಗಿ ಹಬ್ಬಿರುವ ಕ್ಯಾಪಿಟೇಷನ್ ಫೀ ಹಾವಳಿಯನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳುವ ಬದಲು ರಾಜ್ಯದ ಮುಖ್ಯ ಮಂತ್ರಿ ರಾಮಕೃಷ್ಣ ಹೆಗ್ಗಡೆಯವರು ಪ್ರತೀ ಜಿಲ್ಲೆಯಲ್ಲೂ ಖಾಸಗಿ ವೈದ್ಯ ಹಾಗು ಇಂಜಿನೀಯರಿಂಗ್ ಶಾಲೆಗಳನ್ನು ಆರಂಭಿಸುವ ಇಂಗಿತವನ್ನು ವ್ಯಕ್ತ ಪಡಿಸುವುದರ ಬಗ್ಗೆ ರಾಜ್ಯ ಕಾರ್ಯದರ್ಶಿ ಮಂಡಳಿಯು ತೀವ್ರ ಪ್ರತಿಭಟನೆ ವ್ಯಕ್ತ ಪಡಿಸಿತು. ನಿಕರಾಗುವದ ಪ್ರತಿ ಕ್ರಾಂತಿಕಾರಿಗಳಿಗೆ ನೆರವು ನೀಡುವ ಅಮೇರಿಕಾ ಸರಕಾರದ ಖಂಡಿಸುವ ಹಾಗು ತಾರಾ ಯುದ್ಧ ಸಿದ್ಧತೆಯನ್ನು ಕೈಬಿಡಲು ತಯಾರಿಲ್ಲದ ಅಮೇರಿಕಾದ ಅಧ್ಯಕ್ಷ ರೇಗನ್ ನಿಲುಮೆಯನ್ನು ಖಂಡಿಸುವ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

ಮುಖ್ಯ ಮಂತ್ರಿಗಳೊಂದಿಗೆ ಮಾತುಕತೆ

(1ನೇ ಪುಟದಿಂದ)

ವಿವರಗಳನ್ನು ಸಾರ್ವಜನಿಕರ ಅವಗಾಸನೆಗಾಗಿ ಪ್ರಕಟಿಸುತ್ತೇವೆಂಬ ಆಶ್ವಾಸನೆಯನ್ನು ಮುಖ್ಯಮಂತ್ರಿಗಳು ನೀಡಿದರು.

2. ಕನಿಷ್ಠ ಕೂಲಿ :

ನೆರೆ ರಾಜ್ಯಗಳಿಗಿಂತಲೂ ಕಡಿಮೆ ಇರುವುದನ್ನು ಗಮನಕ್ಕೆ ತಂದಾಗ ಇದಕ್ಕಾಗಿ ಒಂದು ಸಮಿತಿ ನೇಮಿಸುವುದಾಗಿಯೂ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

3. ನೀರಾವರಿ ಯೋಜನೆಗಳು :

ಪ್ರಾಂತ ರೈತ ಸಂಘ ಒತ್ತಾಯದ ವಿವಿಧ ಯೋಜನೆಗಳ ಬಗ್ಗೆ ಕೃಷ್ಣ ಹಾಗೂ ಕಾವೇರಿ ಜಲಾನಯನ ಪ್ರದೇಶ ಬಗ್ಗೆ ಎರಡು ಕಾರ್ಪೊರೇಷನ್ ರಚಿಸಿ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವುದಾಗಿ ತಿಳಿಸಿದರು.

4. ಬಂಜರು ಭೂಮಿ ಸಾಗುವಳಿ ಸಕ್ರಿಯಗೊಳಿಸುವುದು:

ದಟ್ಟ ಅರಣ್ಯದ ಹೊರತಾಗಿ ಉಳಿದೆಲ್ಲಾ ಭೂಮಿಯಲ್ಲಿಯೂ ಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸುವುದಿಲ್ಲವೆಂಬ ಆಶ್ವಾಸನೆ ನೀಡಿದರು.

5. ಕೃಷಿ ಸಾಲ :

ಕೃಷಿ ಸಾಲ ಮರು ಪಾವತಿಗಾಗಿ ರೈತರ ಆಸ್ತಿ ಪಾಸ್ತಿ ಜಫ್ತಾಗದಂತೆ ನೋಡಿಕೊಳ್ಳುವುದಾಗಿ ಹೇಳಿದ್ದಾರೆ. ಇದೇ ಗ್ರಾಮಗಳನ್ನೇ ಸಾಲ ಮರು ಪಾವತಿ ಇಲ್ಲವೆಂದು ಡಿಫಾಲ್ಟರ್ ಎಂದು ಘೋಷಿಸುವುದನ್ನು ತಪ್ಪಿಸಲು ನಿಯಮಾವಳಿಗಳ ಬದಲಾವಣೆ ಸಾಧ್ಯವೇ ಎಂಬುದನ್ನು ಪರಿಶೀಲಿಸುವುದಾಗಿ ತಿಳಿಸಿದ್ದಾರೆ. ಸಾಲದ 50% ವಸ್ತು ರೂಪದಲ್ಲಿ ಕೊಡುವುದೆಂಬ ಕಾರಣಕ್ಕಾಗಿ ಖಾಸಗಿ ಸಂಸ್ಥೆಗಳಿಗೆ ಸಾಲದ ಹಣ ಪಾವತಿ ಮಾಡುವುದನ್ನು ತಪ್ಪಿಸಿ ಸರಕಾರಿ ಸಂಸ್ಥೆಗಳ ಮೂಲಕವೇ ಈ ಸಾಲಭಾಗವನ್ನು ನೀಡಲು ಕೇಳಿಕೊಳ್ಳಲಾಗಿದೆ.

6. ಗ್ರಾಮೀಣ ಬಡಜನರ ವಸತಿ :

ಭೂ ಸುಧಾರಣೆ ಕಾನೂನು 2 A ಫಾರಂನಲ್ಲಿ ವಾಸದ ಸ್ಥಳಕ್ಕಾಗಿ ಅರ್ಜಿ ಸಲ್ಲಿಸುವ ವಾಯ್ದೆಯನ್ನು ಒಂದು ವರ್ಷ ಮುಂದುವರಿಸುವ ವಿಷಯವನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದ್ದಾರೆ.

ರಾಜ್ಯದ ಮುಖ್ಯ ಮಂತ್ರಿಗಳ ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳನ್ನು ಮಾತುಕತೆಗೆ ಕರೆದು ವಿಚಾರ ವಿನಿಮಯ ಮಾಡಿದ್ದು ಸ್ವಾಗತಾರ್ಹ. ಆದರೆ ಇದರ ಪರಿಣಾಮವಾಗಿ ರೈತರ ಸಮಸ್ಯೆಗಳು ಬಗೆಹರಿದಂತಾದುವು ಎಂದರೆ ಅದು ಸೂಕ್ತವಲ್ಲ ರೈತರು ತಮ್ಮ ಚಳುವಳಿಯನ್ನು ಮುಂದುವರಿಸದಿದ್ದರೆ ಸಮಸ್ಯೆಗಳಿಗೆ ಪರಿಹಾರವಿಲ್ಲ ಎಂದು ರಾಜ್ಯ ಸಮಿತಿ ತಿಳಿಸಿದೆ.

ಡಿ. ವೈ. ಎಫ್. ಐ. ಸಭೆ

ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಅಕ್ಟೋಬರ್ 14 ರಂದು ಡಿ.ವೈ ಎಫ್ ಐ. ನ ಸಭೆ ನಡೆಯಿತು. ಕಾ ಜಿ ವೀರೇಶಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು ಡಿ. ವೈ. ಎಫ್. ಐ ನ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಕಾ. ಜಂಬಯ್ಯ ನಾಯಕ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಕಾ. ಎಂ. ಬಸವರಾಜು ಮುಖ್ಯ ಅತಿಥಿಗಳಾಗಿದ್ದರು.

ಆರಂಭದಲ್ಲಿ ಡಿ. ವೈ. ಎಫ್. ಐ. ನ ಸಿರಗುಪ್ಪ ತಾಲೂಕು ಕಾರ್ಯದರ್ಶಿ ಕಾ. ಎಸ್ ಬಸವರಾಜ್ ಸಭೆಯನ್ನು ಸ್ವಾಗತಿಸಿ ಸಭೆಯ ಉದ್ದೇಶವನ್ನು ವಿವರಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಕಾ ಯು. ರುದ್ರೇಗೌಡರು ಅಸಮಾನತೆಯಿಂದ ತುಂಬಿರುವ ನಮ್ಮ ದೇಶದ ಚರಿತ್ರೆಯನ್ನು ಯುವಕರು ಪ್ರಜಾಸತ್ತಾತ್ಮಕ ಹೋರಾಟಗಳ ಮೂಲಕ ಬದಲಾಯಿಸಬೇಕಾಗಿದೆ ಎಂದು ಹೇಳಿದರು. ರೈತ ಸಂಘದ ಕಾ. ಮಾರೆಪ್ಪ ಅವರು ಮಾತನಾಡಿ ಮುಂಬರುವ ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಯುವ ಜನರು, ರೈತರು ಸಕ್ರಿಯ ಪಾತ್ರ ವಹಿಸಬೇಕೆಂದರು.

ಬೀಡಿ ಕಾರ್ಮಿಕರ ಸಮಾವೇಶ

ಬಳ್ಳಾರಿಯಲ್ಲಿ ರಾಜ್ಯ ಸಮಾವೇಶಕ್ಕೆ ಪೂರ್ವಭಾವಿಯಾಗಿ ಹರಪನಹಳ್ಳಿಯಲ್ಲಿ ದಿ 2-11-86 ರಂದು ಬೀಡಿ ಕಾರ್ಮಿಕರ ಸಮಾವೇಶವನ್ನು ಸಂಘಟಿಸಲು ನಿರ್ಧರಿಸಲಾಯಿತು.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya